# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ


ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 266 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 29.04.2025 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 266 • PRGI No:KARKAN/2023/88055 • VIJAYANAGARA • 29.04.2025 • Tuesday • Page:04 • Rs:2



1,25,000 +
Digital E-PAPER READERS
To book Classified Display Ad
in HAMPI TIMES
Please call on
9448633038



No.1 HAMPI TIMES LEADING PRINT & DIGITAL District News Paper

ನಿಮ್ಮ ಸಂದೇಶ ಜಗತ್ತಿನೆಡೆಗೆ, ಜಾಹೀರಾತು ನಿಮ್ಮದು, ಪ್ರಸಾರ ನಮ್ಮದು!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1.25 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com

ಮುದ್ರಿತ ಜಾಹೀರಾತಿಗೆ ಮಾತ್ರ ಶುಲ್ಕ
ಡಿಜಿಟಲ್ ಆವೃತ್ತಿ ಉಚಿತ*!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ

ಹಂಪಿ ಟೈಮ್ಸ್ ಇ-ಪೇಪರ್
*conditions apply

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


## ಮಕ್ಕಳನ್ನು ಆಧ್ಯಾತ್ಮಿಕ ಚಿಂತನೆಗಳಲ್ಲಿ ತೊಡಗಿಸಿ

### ಕಿರ್ಲೋಸ್ಕರ್ ಎಂ.ಡಿ. ಆರ್.ವಿ.ಗುಮಾಸ್ತೆ ಹೇಳಿಕೆ | ಆತ್ಮವಿಶ್ವಾಸ ಹೆಚ್ಚಳ | ನೈತಿಕ ಮೌಲ್ಯಗಳ ಬೆಳವಣಿಗೆ | ಓದಿಗೆ ಏಕಾಗ್ರತೆಯ ಬಲ

### ಸಂಗೀತ ಭಾರತಿ ಶಂಕರ ತತ್ವ 400ನೇ ಮಾಸಿಕ ಚಿಂತನ ಸಂಭ್ರಮ | ಬಹುಮುಖ ಪ್ರತಿಭೆಗಳಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ



■ ಹಂಪಿ ಟೈಮ್ಸ್ ಹೊಸಪೇಟೆ

ಇಂದಿನ ಯುವಜನಾಂಗ ಅನೇಕ ಒತ್ತಡಗಳ ನಡುವೆ ಗಳಿಕೆಯತ್ತ ಮುಖ ಮಾಡಿದ್ದಾರೆ. ಆದರೆ ಗಳಿಕೆಗಿಂತ ಆಧ್ಯಾತ್ಮಿಕ ಚಿಂತನೆಯೆ ಸಕಲ ಸಮಸ್ಯೆಗಳು ಪರಿಹಾರ ಎಂಬುದನ್ನು ಅರಿಯಬೇಕಿದೆ ಎಂದು ಕಿರ್ಲೋಸ್ಕರ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಆರ್.ವಿ.ಗುಮಾಸ್ತೆ ಅಭಿಪ್ರಾಯಪಟ್ಟರು.

ನಗರದ ಸಂಗೀತ ಭಾರತಿ ಮತ್ತು ಆದಿಗುರು ಶ್ರೀಶಂಕರ ಸಾಹಿತ್ಯ ಪರಿಷತ್ತುವತಿಯಿಂದ ಭಾನುವಾರ ಸಂಜೆ ಮಲ್ಲಿಗೆ ಹೋಟೇಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಶಂಕರ ತತ್ವ 400ನೇ ಮಾಸಿಕ ಚಿಂತನ ಸಂಭ್ರಮ ಹಾಗೂ ಬಹುಮುಖ ಪ್ರತಿಭೆಗಳಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಇಳಿವಯಸ್ಸಿನಲ್ಲಿ ಆಧ್ಯಾತ್ಮಿಕ ಚಿಂತನೆಗಳತ್ತ ಮಾಡುವುದಕ್ಕಿಂತ, ತಮ್ಮ ಮಕ್ಕಳ, ಮೊಮ್ಮಕ್ಕಳನ್ನು ಶಿಕ್ಷಣದ ಜೊತೆಗೆ ಆಧ್ಯಾತ್ಮಿಕ ವಿಚಾರ ಚಿಂತನೆಗಳಲ್ಲಿ ತೊಡಗಿಸಿಬೇಕಿದೆ. ಶ್ರೀ ಶಂಕರರು ತಮ್ಮ 32ನೇ ವಯಸ್ಸಿನ ಜೀವಿತಾವಧಿಯಲ್ಲಿ ಏನೆಲ್ಲಾ ಸಾಧನೆ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅಜ್ಞಾನದ ಮೌಢ್ಯಗಳ ಕಳೆ ತೆಗೆದುಹಾಕಲು ಜ್ಞಾನದ ಜೊತೆಗೆ ಸಂಸ್ಕಾರ, ಸಂಸ್ಕೃತಿಗಳ ಮಹತ್ವವನ್ನು ಇಂದಿನ ಮಕ್ಕಳಿಗೆ ಉಣಬಡಿಸಬೇಕಿದೆ. ಸಂಗೀತ ಭಾರತಿ 34 ವರ್ಷಗಳ ಕಾಲ ನಿರಂತರವಾಗಿ ಪ್ರತಿ ತಿಂಗಳು ಎಲೆಮರೆಯ ಸಾಧಕರನ್ನು ಗುರುತಿಸಿ, ಗೌರವಿಸಿ, ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಗಣ್ಯರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ಹಂಪಿಟೈಮ್ಸ್ ದಿನಪತ್ರಿಕೆಯ ಸಂಪಾದಕ ಬಸಾಪುರ ಬಸವರಾಜ ಅವರಿಗೆ ಸಂಗೀತ ಭಾರತಿಯಿಂದ ಆದಿಗುರು ಶ್ರೀಶಂಕರ ಅನುಗ್ರಹ ಪುರಸ್ಕಾರದೊಂದಿಗೆ ಅಶೀರ್ವದಿಸಿದರು. ರಾಜ್ಯದ ನಾನಾ ಭಾಗಗಳಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 15 ಪ್ರತಿಭೆಗಳಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

ಸಮಾಜದ ಹಿರಿಯ ಮುಖಂಡರಾದ ಬಿ.ಎಸ್.ಭಾಸ್ಕರ್ ಅಧ್ಯಕ್ಷತೆವಹಿಸಿದ್ದರು. ಬ್ರಾಹ್ಮಣ ಸಮಾಜದ ಅಧ್ಯಕ್ಷ ದಿವಾಕರ, ಹಿರಿಯ ಮುಖಂಡರಾದ ಪ್ರೊ.ಯು. ರಾಘವೇಂದ್ರರಾವ್, ಮಾಣಿಕ್ಯಪ್ರಭು, ವೆಂಕನಗೌಡ್ರು, ಶ್ರೀಕೃಷ್ಣ ಕುಲಕರ್ಣಿ, ರಾಜು ಕುಲಕರ್ಣಿ, ಪಿ.ಡಿ.ಗೌತಮ, ಗುಜ್ಜಲ ಗಣೇಶ, ಗುಜ್ಜಲ ನಾಗರಾಜ, ಗುಂಡಿ ರಮೇಶ, ಪಿ.ವೆಂಕಟೇಶ್, ಎಸ್.ಎಸ್.ಚಂದ್ರಶೇಖರ, ಪಂತರ್ ಜಯಂತ್, ವೇಣು ಗೋಪಾಲ ವೈದ್ಯ, ವೇದಸ್ವಾಮಿ, ವೀರಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ಸಂಗೀತ ಭಾರತಿ ಅಧ್ಯಕ್ಷ ಹೆಚ್.ಪಿ.ಕಲ್ಲಂಭಟ್ ನಿರ್ವಹಿಸಿದರು. ಸಮಾರಂಭಕ್ಕೂ ಮುನ್ನ ಸುರೇಶ್ ಸೌಂಡ್ಸ್ ಮತ್ತು ಗಾಯಕರ ತಂಡ ಸುಮಧುರ ಕಂಠದಿಂದ ಹಳೇ ಕನ್ನಡ ಚಿತ್ರಗಳನ್ನು ಪ್ರಸ್ತುತಪಡಿಸಿದರು.

## ನಿನಗೆ ನೀನೇ ಬೆಳಕು

ದುಡ್ಡಿಲ್ಲದವ ಬಡವನಲ್ಲ
ಗುರಿ ಮತ್ತು ಕನಸು ಇಲ್ಲದವ
ನಿಜವಾದ ಬಡವ
– ಸ್ವಾಮಿ ವಿವೇಕಾನಂದ


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 28–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.30 ಅಡಿ |
| ಒಳ ಹರಿವು | 447 ಕ್ಯುಸೆಕ್ |
| ಹೊರ ಹರಿವು | 332 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.878 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1578.29 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 260 ಕ್ಯುಸೆಕ್ |
| ಸಾಮರ್ಥ್ಯ | 3.696 ಟಿಎಂಸಿ |

## ರಸ್ತೆ ಅಗಲೀಕರಣಕ್ಕೆ ಒತ್ತುವರಿ ತೆರವುಗೊಳಿಸಿ

### ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್‌ಹೇಳಿಕೆ | ಜೋರಾದ ಮಾತಿನ ಚಕಮಕಿ | ತಿಳಿಗೊಳಿಸಿದ ಡಿಸಿ



■ ಹಂಪಿ ಟೈಮ್ಸ್ ಹರಪನಹಳ್ಳಿ

ಗ್ರಾಮೀಣ ಭಾಗದ ಸಮಸ್ಯೆಗಳನ್ನು ತಿಳಿದು ಬಗೆಹರಿಸಲು ಮುಂದಿನ ದಿನಗಳಲ್ಲಿ ಜನಸ್ಪಂದನಾ ಕಾರ್ಯಕ್ರಮವನ್ನು ಹೋಬಳಿ ಮಟ್ಟಕ್ಕೆ ವಿಸ್ತರಣೆ ಮಾಡಲಾಗುವುದು ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಡಾ.ಬಾಬುಜಗಜೀವನರಾಂ ಸಮುದಾಯ ಭವನದಲ್ಲಿ ಸೋಮವಾರ ತಾಲೂಕು ಆಡಳಿತದವತಿಯಿಂದ ಆಯೋಜಿಸಿದ್ದ ಜನಸ್ಪಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಚಿಗಟೇರಿ ಗ್ರಾಮದಲ್ಲಿ ಹಲವಾರು ವರ್ಷಗಳಿಂದ ಕೋರ್ಟ ನಿಂದ ತಡೆಯಾಜ್ಞೆ ಇರುವ ಮನೆಗಳನ್ನು ಹೊರತು ಪಡಿಸಿ ಉಳಿದಂತೆ ಒತ್ತುವರಿ ತೆರವುಗೊಳಿಸಿ ರಸ್ತೆ ಅಗಲೀಕರಣ ಮಾಡಿ ಎಂದು ಗ್ರಾಮಸ್ಥರು ಆಹ್ವಾಲನ್ನು ಇಟ್ಟರು.

ಆಗ ಶಾಸಕಿ ಮದ್ಯೆ ಪ್ರವೇಶಿಸಿ ರಸ್ತೆ ನಿರ್ಮಾಣವಾಗಲು ಗ್ರಾಮದ ಕೆಲವರು ವಿನಾ ಕಾರಣ ಅಧಿಕಾರಿಗಳಿಗೆ ತೊಂದರೆ ಮಾಡುತ್ತಿದ್ದಾರೆ ಎನ್ನುತ್ತಿದ್ದಂತೆ ಗ್ರಾಮಸ್ಥ ಜಾತಪ್ಪ ಹಾಗೂ ಶಾಸಕಿ ಮತ್ತು ಲೋಕೋಪಯೋಗಿ ಇಲಾಖೆಯ ಅಭಿಯಂತರ ಪ್ರಕಾಶ್ ಪಾಟೀಲ್ ಮದ್ಯೆ ಮಾತಿನ ಚಕಮುಕಿ ತಾರಕಕ್ಕೇರಿತು. ಆಗ ಜಿಲ್ಲಾಧಿಕಾರಿ ತಿಳಿಗೊಳಿಸಲು ಪ್ರಯತ್ನಿಸಿದರಾದರೂ ಶಾಸಕಿ ನಾಳೆಯೆ ರಸ್ತೆ ಅಗಲೀಕರಣ ಪ್ರಾರಂಭಿಸಿ, ಅಡ್ಡಿ ಪಡಿಸಿದರೆ ಕ್ರಮಕೈಗೊಳ್ಳಿ ಎಂದು ಪೋಲೀಸರಿಗೆ ಸೂಚಿಸಿದರು. ಆಗ ಜಾತಪ್ಪ ಈ ರೀತಿಯ ಬೆದರಿಕೆಗೆ ಹೆದರುವವರು ನಾವಲ್ಲ ನಾನು ವಕೀಲನಿದ್ದೇನೆ ಕೋರ್ಟು ಕಚೇರಿಗೆ ನಿತ್ಯ ಅಲೆದಾಡುತ್ತೇವೆ ಎಂದು ಸಮಜಾಯಿಸಿ ಕೊಟ್ಟರು, ನಂತರ ಜಿಲ್ಲಾಧಿಕಾರಿ ಮಾತಿನ ಭರಾಟೆಯನ್ನು ತಡೆದು ತಿಳಿಗೊಳಿಸಿದರು.

ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿ, ಸಾರ್ವಜನಿಕರು ತಮ್ಮಲ್ಲಿಗೆ ಬಂದಾಗ ಅಧಿಕಾರಿಗಳು ಸೌಜನ್ಯದಿಂದ ಮಾತನಾಡಿಸಿ ಶೀಘ್ರವಾಗಿ ಅವರ ಕೆಲಸ ಕಾರ್ಯಗಳನ್ನು ಮಾಡಿಸಿಕೊಡಬೇಕು ಎಂದು ಸೂಚಿಸಿದರು.

**ಅಹವಾಲು ಸಲ್ಲಿಸಲು ಮುಗಿಬಿದ್ದ ಜನತೆ–**

ಚಿಕ್ಕಬ್ಬಳ್ಳಿ, ಅರಸೀಕೆರೆ, ಬೂದಿಹಾಳ ಗ್ರಾಮಗಳಿಗೆ ಬಸ್ಸಿನ ವ್ಯವಸ್ಥೆ ಮಾಡಿಸಿ ಎಂದು ಬೂದಿಹಾಳ ಗ್ರಾಮದ ಡಿ.ಕೆ.ಮರಿಯಪ್ಪ ಅರ್ಜಿ ಸಲ್ಲಿಸಿದರೆ, ಯರಬಾಳು, ಮತ್ತೂರಿಗೆ ಬಸ್ಸಿನ ವ್ಯವಸ್ಥೆ ಮಾಡಿ ಎಂದು ಆ ಭಾಗದ ಜನರು ಕೋರಿದರು.

ಚಿಗಟೇರಿ ಗ್ರಾಮದಲ್ಲಿ ಕೋರ್ಟ್ನಿಂದ ತಡೆಯಾಜ್ಞೆ ಇರುವ ಮನೆಗಳನ್ನು ಹೊರತು ಪಡಿಸಿ ಉಳಿದಂತೆ ಒತ್ತುವರಿ ತೆರವುಗೊಳಿಸಿ ರಸ್ತೆ ಅಗಲೀಕರಣ ಮಾಡಿ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹಾಗೂ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಸಂಬಂಧಿಸಿದ >>4

## ಮೇ 9 ರಂದು ಕುಡತಿನಿ ಪಟ್ಟಣ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ

■ ಹಂಪಿ ಟೈಮ್ಸ್ ಬಳ್ಳಾರಿ

ತಾಲ್ಲೂಕಿನ ಕುಡತಿನಿ ಪಟ್ಟಣ ಪಂಚಾಯಿತಿಯ ಅಧ್ಯಕ್ಷರ ಸ್ಥಾನಕ್ಕೆ ಮೇ 09 ರಂದು ಚುನಾವಣೆ ನಡೆಸಲು ದಿನಾಂಕ ನಿಗದಿಪಡಿಸಲಾಗಿದೆ ಎಂದು ಬಳ್ಳಾರಿ ತಾಲ್ಲೂಕು ತಹಶೀಲ್ದಾರರು ತಿಳಿಸಿದ್ದಾರೆ.

## ಇಂದು ಬಳ್ಳಾರಿ ವಲಯ ಐ.ಜಿ.ಪಿ ಅವರ ನಿವೃತ್ತಿ ಬೀಳ್ಕೊಡುಗೆ ಸಮಾರಂಭ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕರಾದ ಬಿ.ಎಸ್.ಲೋಕೇಶ್ ಕುಮಾರ್ ಅವರ ನಿವೃತ್ತಿ ಹಿನ್ನಲೆಯಲ್ಲಿ ಏ.29 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಕೋಟೆ ಪ್ರದೇಶದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.



ಅದೇ ದಿನದಂದು ಸಂಜೆ 4.30 ಗಂಟೆಗೆ ಜಿಲ್ಲಾ ಸಶಸ್ತ್ರ ಪೊಲೀಸ್ ಕವಾಯತು ಮೈದಾನದಲ್ಲಿ ಬೀಳ್ಕೊಡುಗೆ ಸಮಾರಂಭ ಅಂಗವಾಗಿ ಸೇವಾ ಕವಾಯತು ಆಯೋಜಿಸಲಾಗಿದೆ.

ಬಳ್ಳಾರಿ ವಲಯ ಪೊಲೀಸ್ ಮಹಾ ನಿರೀಕ್ಷಕರಾದ ಬಿ.ಎಸ್. ಲೋಕೇಶ್ ಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಶೋಭಾ ರಾಣಿ ವಿ.ಜೆ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು. ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಕೆ.ಪಿ.ರವಿಕುಮಾರ್, ಎಸ್.ನವೀನ್ ಕುಮಾರ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಹಾಗೂ ಇನ್ನಿತರರು ಉಪಸ್ಥಿತರಿರುವರು ಎಂದು ಜಿಲ್ಲಾ ಪೊಲೀಸ್ ಇಲಾಖೆ ಪ್ರಕಟಣೆ ತಿಳಿಸಿದೆ.


## ನಿತ್ಯ ಪಂಚಾಂಗ

ಮಾಸ: ವೈಶಾಖ | ಸಂವತ್ಸರ: ವಿಶ್ವಾವಸು

29–04–2025 – ಮಂಗಳವಾರ

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಕೃತ್ತಿಕಾ |
| ಯೋಗ | : ಸೌಭಾಗ್ಯ |
| ಕರಣ | : ಬಾಳವ |
| ಸೂರ್ಯೋದಯ | : 05:56:22 |
| ಸೂರ್ಯಾಸ್ತ | : 18:52:27 |
| ರಾಹು ಕಾಲ | : 15:38–17:15 |
| ಯಮಘಂಡ ಕಾಲ | : 09:10–10:47 |
| ಗುಳಿಕ ಕಾಲ | : 12:24–14:01 |

## ಆನಂದ ಬಾಣ





ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.


## ಮೇ 2 ಆದಿ ಗುರು ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಆದ್ಯ ಗುರು ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮವನ್ನು ಮೇ 02 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸಂಗನಕಲ್ಲು ರಸ್ತೆಯ ಶ್ರೀ ಭಾರತೀತೀರ್ಥ ಸಭಾಭವನದಲ್ಲಿ ಆಯೋಜಿಸಲಾಗಿದೆ.



ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಶ್ರೀ ಶೃಂಗೇರಿ ಶಂಕರಮಠದ ಗೌರವ ವ್ಯವಸ್ಥಾಪಕರಾದ ಬಿ.ಕೆ.ಬಿ.ಎನ್.ಮೂರ್ತಿ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ವೇದಬ್ರಹ್ಮ ಶ್ರೀರಾಮ ಸುಬ್ರಹ್ಮಣ್ಯ ಶರ್ಮ ಅವರು ಜಯಂತಿ ಕುರಿತು ವಿಶೇಷ ಉಪನ್ಯಾಸ ನೀಡುವರು. **ಮೆರವಣಿಗೆ:** ಜಯಂತಿ ಅಂಗವಾಗಿ ಮೇ 01 ರಂದು ಸಂಜೆ 4.30 ಗಂಟೆಗೆ ನಗರದ ಸತ್ಯನಾರಾಯಣ ಪೇಟೆ–ವೆಂಕಟೇಶ್ವರ ದೇವಸ್ಥಾನದಿಂದ– ಇಂದಿರಾ ವೃತ್ತ–ಬೆಂಗಳೂರು ರಸ್ತೆ–ಸಭಾಪತಿ ಬೀದಿ–ಶ್ರೀ ಶೃಂಗೇರಿ ಶಂಕರಮಠದವರಗೆ ಮೆರವಣಿಗೆ ನಡೆಯಲಿದೆ. ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್‌ನ ಸಿಇಒ ಮಹಮ್ಮದ್ ಹ್ಯಾರೀಸ್ ಸುಮೈರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಮಹಾನಗರ ಪಾಲಿಕೆ ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಇತರರು ಉಪಸ್ಥಿತರಿರಲಿದ್ದಾರೆ.

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ : ಪ್ರವೇಶ ಪರೀಕ್ಷೆ ಸುಸೂತ್ರ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ (ಆಂಗ್ಲ ಮಾಧ್ಯಮ) ಶಾಲೆ ಮತ್ತು ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ (ಸಿಬಿಎಸ್‌ಸಿ) ಶಾಲೆಗಳ ದಾಖಲಾತಿಗಾಗಿ 2025–26 ನೇ ಶೈಕ್ಷಣಿಕ ವರ್ಷಕ್ಕೆ 6ನೇ ತರಗತಿ ಪ್ರವೇಶ ಪರೀಕ್ಷೆಯು ಭಾನುವಾರ ಸುಸೂತ್ರವಾಗಿ ನಡೆದಿದೆ.

ಜಿಲ್ಲೆಯಾದ್ಯಂತ ಒಟ್ಟು 1571 ಅರ್ಜಿಗಳು ಸಲ್ಲಿಕೆಯಾಗಿದ್ದವು. 05 ಕೇಂದ್ರಗಳಲ್ಲಿ ಪ್ರವೇಶ ಪರೀಕ್ಷೆ ನಡೆದಿದ್ದು, 595 ಗಂಡು ಮತ್ತು 473 ಹೆಣ್ಣು ಸೇರಿ ಒಟ್ಟು 1038 ವಿದ್ಯಾರ್ಥಿಗಳು ಹಾಜರಾಗಿದ್ದರು. ಅದರಲ್ಲಿ 503 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ತಿಳಿಸಿದ್ದಾರೆ.

# ಪ್ರೀತಿ ಲಹರಿ

**ಪ್ರೀತಿ ಏಕೆ ಭೂಮಿ ಮೇಲಿದೆ ಬೇರೆ ಎಲ್ಲೂ ಜಾಗವಿಲ್ಲದೆ**



ಹೌದೇನೋ, ಈ ಭೂಮಿಯನ್ನು ಆವರಿಸಿಕೊಂಡಿರುವ ಈ ಎರಡೇ ಎರಡು ಅಕ್ಷರಗಳು ಏನೆಲ್ಲಾ ಆಟ ಆಡುತ್ತವೆ ಎಷ್ಟೆಲ್ಲಾ ನಾಟಕ ಮಾಡುತ್ತವೆ, ಎಷ್ಟೆಲ್ಲಾ ಪಾತ್ರಗಳನ್ನು ನಿರ್ವಹಿಸುತ್ತವೆ ಅಬ್ಬಬ್ಬಾ ಈ ಪ್ರೀತಿನೆ ಒಂಥರಾ ಅಪ್ರತಿಮ! ಜಗತ್ತಿನಲ್ಲಿ ಎಷ್ಟೆಲ್ಲಾ ಪ್ರೀತಿಗಳಿದ್ರೂ... ಈ ಹೆಣ್ಣು ಗಂಡಿನ ನಡುವಿನ ಪ್ರೀತಿ ಎಲ್ಲಿಂದೆಲ್ಲಿಂದಲೋ ಆರಂಭವಾಗ್ತದೆ ಬಿಡಿ, ಸಿನಿಮಾಗಳಲ್ಲಿ, ನಾಟಕಗಳಲ್ಲಿ ಹೆಣ್ಣು ಯಾವುದೋ ಆಪಾಯದಲ್ಲಿದ್ದಾಗ ನಮ್ಮ ನಾಯಕ ಬಂದು ಕಾಪಾಡಿದ ತಕ್ಷಣ ಅವಳಿಗೆ ಅವನ ಮೇಲೆ ಪ್ರೀತಿನೋ ಪ್ರೇಮಾನೋ ಉಕ್ಕಿ ಹರಿಯುವುದು ಕಂಡುಬರುತ್ತದೆ. ಅದೆಲ್ಲಾ ನಿಜವಾಗಿ ಆಗೋದು ತುಂಬಾ ವಿರಳ ರೀ..ಆದ್ರೆ ಸರಳವಾಗಿ ಹೇಳ್ಬೇಕಂದ್ರೆ ಜೀವನದಲ್ಲಿ ಪ್ರೀತಿ ಶುರುವಾಗೋಕೆ ಹಿಂದೆಲ್ಲಾ ಕಣ್ನೋಟ ಕಾರಣವಾಗ್ತಿತ್ತಂತೆ ಆದ್ರೀಗ ಕಂತೆ ನೋಟ್ ಕಾರಣವಾಗ್ತಿದೆಯಂತೆ.

ಕಣ್ಣು ಕಣ್ಣು ಕಲೆತಾಗ ಮನವು ಉಯ್ಯಾಲೆ ಯಾಗಿದೆ ತೂಗಿ .... ಅನ್ನೋದೆಲ್ಲಾ ಕಣ್ಮರೆಯಾಗ್ತಿದೆ ನೋಡ್ರಿ....

ಈಗಿನ ಪ್ರೀತಿ ಕಣ್ಣಿಂದ ಅಲ್ಲ ಕೈ ಬೆರಳಿಂದ ಶುರುವಾಗುತ್ತೆ ಗೊತ್ತಾ..! ಎಲ್ಲೋ ಆಕಸ್ಮಿಕ ಭೇಟಿ, (ಬೇಟೆ ) ಬಸ್ ಸ್ಟಾಂಡ್, ರೈಲ್ವೇ ಸ್ಟೇಷನ್, ಸಭೆ ಸಮಾರಂಭ, ಟೀ ಶಾಪ್, ಐಸ್ ಕ್ರಿಂ ಪಾರ್ಲರ್ ಅಷ್ಟೇ ಯಾಕ್ರೀ ಒಮ್ಮೊಮ್ಮೆ ಮದ್ವೆ ಮನೇಲೂ, ಒಂದು ಪರಿಚಯ, ಆಮೇಲೆ ಫೋನ್ ನಂಬರ್ ವಿನಿಮಯ, ಆಮೇಲೆ ಶುರುವಾಯ್ತು ನೋಡಿ ಬೆರಳಿಗೆ ಕೆಲ್ಸ ! ಅಯ್ಯೋ ಮೆಸೇಜ್ ಟೈಪ್ ಮಾಡೋದಪ್ಪಾ! ಹಗ್ಲೂ ರಾತ್ರಿ ಮೆಸೇಜ್ಗಳ ಅನಾವರಣ ಇಬ್ಬರ ಆವರಣ ಹೊಕ್ಕೇ ಬಿಡುತ್ತೆ! ಆಮೇಲೆ ತಗೊಳಪ್ಪ ಶುಬೋಧಯದಿಂದ ಶುಭರಾತ್ರಿವರ್ಗೂ ಏನೇನೆಲ್ಲಾ ..... ಛೇ ಬಿಡಿ ಹೇಳೋಕಾಗಲ್ಲ ಅಲ್ಲಲ್ಲ ಹೇಳ್ಬಾರ್ದು ಬಿಡೀಪಾ...ಇನ್ನು ಸ್ವಲ್ಪ ವರ್ಷಗಳ ಹಿಂಚೆ ಸಣ್ಣ ಅಂಚೆ ಪತ್ರದಿಂದ ಪ್ರಾರಂಭವಾಗಿ ರಿಜಿಸ್ಟರ್ಡ್ ವಿವಾಹದಲ್ಲಿ ಪಾವನವಾದ ಉದಾಹರಣೆಗಳೂ ಇಲ್ಲದಿಲ್ಲ ! ಯಾಕೋ ಬೇಡ ಬೇಡಾಂದ್ರೂ ಒಲವಿನ ಉಡುಗೊರೆ ಕೊಡಲೇನು? ರಕುತದಿ ಬರೆದೆನು ಇದ ನಾನು ಹಾಡು ನೆನಪಾಗ್ತಿದೆ ಕಣ್ರೀ..!

ರಕ್ತದಲ್ಲೇ ಬರುದ್ರೋ ... ಕೆಂಪು ಶಾಹಿಯಲ್ಲೇ ಬರುದ್ರೋ ಯಾರ್ರಿಗೊತ್ತು ಬಿಡಿ. ಅಂದಹಾಗೆ ಈ ಪ್ರೀತಿಗೂ ಪ್ರೇಮಕ್ಕೂ ಏನು ವ್ಯತ್ಯಾಸ ಹೇಳಿ? ಕೈತೋಟದ ಗುಲಾಬಿ ಗಿಡಕ್ಕೆ ನೀರು ಗೊಬ್ಬರ ಹಾಕಿ ಚೆನ್ನಾಗಿ ಆರೈಕೆ ಮಾಡಿ ಮೊಗ್ಗರಳಿದಾಗ ಸಂಭ್ರಮಿಸೋದು ಪ್ರೀತಿ ಆದ್ರೆ ಇದು ನನ್ಗೇ ಸೇರ್ಬೇಕು ಅಂತ ಕಿತ್ತು ಹೃದಯಕ್ಕೆ ಒತ್ತಿಹಿಡಿದು ನೆತ್ತಿ ಮೇಲೆ ಏರಿಸ್ಕೊಳೋದು ಪ್ರೇಮವಿರಬೇಕೇನೋ ...? ನಿಜವಾದ ಪ್ರೀತಿ ಹೂ ಅರಳಿದಂಗಿರ್ಬೇಕು, ಪಕಳೆಗಳು ಹೊರಳದಂಗಿರ್ಬೇಕು. ಪ್ರೀತಿ ಯಾವಾಗ ಬೇಕಾದ್ರೂ ಶುರುವಾಗಬಹುದಲ್ವೇ...? 2 ವರ್ಷದ ಪೋರಂಗೂ ಪಕದ್ಮನೆ ಸಣ್ಣ ಹುಡ್ಗಿ ಕಂಡ್ರೆ ಒಂಥರಾ ಪ್ರೀತಿ, ವಯಸ್ಸಾದ್ಮೇಲೂ ಪ್ರೀತಿ ಚಿಗುರಬಾರದು ಅಂತೆಲ್ಲೂ ರೂಲ್ಸ್ ಇಲ್ವಲ್ರೀ... ಮನಸ್ಸಿಗೆ ವಯಸ್ಸಾಗೋದೇ ಇಲ್ವಲ್ಲ !

ಏನೋ ಒಂದು ಹೋಗ್ಲಿ ಬಿಡಿ ಆದ್ರೆ ಈ ಮೆಸೇಜ್ಗಳ ಪ್ರೀತಿ ದಿನೇ ದಿನೇ ಸಾರ ಕಳ್ಕೊಂಡು ಒಬ್ಬಿಗೊಬ್ರು ಸಸಾರವಾಗಿ ಬಿಡ್ತಿರೋದಕ್ಕೆ ನಂಗೊಂದಿಷ್ಟು ಬೇಸರ ಇದೆಯಪ್ಪ! ಯಾಕಂತೀರ ಒಬ್ರು ಒಂದು ಫೋನ್ ಇಟ್ಕೊಂಡು ನಾಲ್ಕು ಜನಕ್ಕೆ ಮೆಸೇಜ್ನಲ್ಲೇ ಪ್ರೀತಿ ಮಾಡೋ ಕಾಲ ಬಂದ್ಬಿಡ್ತಪ್ಪಾ! ಪ್ರೀತಿಗೆ ಪ್ರತಿಫಲ ಪ್ರೀತಿನೇ ಆಗ್ಬೇಕು ಅಂತ ಅಂದ್ಕೊಳ್ಳೊ ಕಾಲ ಇದಲ್ಲ ಬಿಡಿ,

ಹೋಗ್ಲಿಬಿಡಿ ಅವರಿವರ ವಿಷ್ಯ ನಮಗ್ಯಾಕೆ? ಅದೊಂತರಾ ವಿಷ ಇದ್ದಂಗೆ ! ಬೇಜಾರಾಗ್ಬೇಡಿ ಪ್ರೀತಿ ಮಾಡಬಾರದು, ಮಾಡಿದರೆ ಜಗಕೆ ಹೆದರ ಬಾರದು ಅಂತ ನಿಜವಾಗ್ಲೂ ಪ್ರೀತಿ ಮಾಡೋರು ಬೆರಳೆಣಿಕೆಯಷ್ಟು ಮಂದಿ ಸಿಗಬಹುದೇನೋ....ಅವರ ಬಾಯಲ್ಲಿ ಪ್ರೀತಿ ನೀನಿಲ್ಲದೆ ನಾನು ಹೇಗಿರಲಿ? ಹಾಡು ಗುನುಗುನುಸ್ತಾ ಇರ್ಬಹುದು.

ಒಟ್ನಲ್ಲಿ ಪ್ರೀತಿ ಏಕೆ ಭೂಮಿ ಮೇಲಿದೆ...? ಬೇರೆ ಎಲ್ಲೂ ಜಾಗವಿಲ್ಲದೆ...

**– ಶೋಭಾ ಮಲ್ಲಿಕಾರ್ಜುನ್**
**ಶಿಕ್ಷಕಿ ಮತ್ತು ಕವಯತ್ರಿ ಚಿತ್ರದುರ್ಗ.**


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038



## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**


**ಪ್ರಕೃತಿದತ್ತ ವಸ್ತುಗಳ ರಹಿತವಾದ ತಾಂತ್ರಿಕ-ಯಾಂತ್ರಿಕ ಸಾಧನಗಳನ್ನೊಳಗೊಂಡ ಕಛೇರಿ-ಮನೆಯಲ್ಲಿ ಬದುಕುತ್ತಿರುವ ಜನ। ಮಣ್ಣು, ಬೊಂಬು, ಕಟ್ಟಿಗೆ ಮನೆಗಳು ಮಾಯ! । ಕಾಂಕ್ರೀಟ್- ಕೆಮಿಕಲ್‌ಯುಕ್ತ ಕೃತಕ ವಸ್ತುಗಳೊಂದಿಗೆ ಕ್ಷಣ ಕ್ಷಣವೂ ಉಸಿರಾಟ । ಅಭಿವೃದ್ಧಿಯ ನಾಗಲೋಟದಲ್ಲಿ ಪೂರ್ವಜರ ಬದುಕಿನ ಮೌಲ್ಯ ಅರಿಯದ ಆಡಳಿತ ವ್ಯವಸ್ಥೆ**

# ಅಭಿವೃದ್ಧಿ ಏರಿಕೆ ಜೀವಿತಾವಧಿ ಇಳಿಕೆ

## ಆಧುನಿಕ ಬದುಕಿನ ಮಾದರಿಗಳನ್ನು ಮೆಲ್ಲಗೆ ಕೈಬಿಟ್ಟರೆ ದೇಹದ ಬಾಳಿಕೆ ಅಧಿಕ

ಲೋಕದಲ್ಲಿ ಜೀವ ಪಡೆದ ಪ್ರತಿಯೊಂದು ಜೀವ-ಜಂತುಗಳು ಒಂದಲ್ಲ ಒಂದು ದಿನ ಸಾವು ಪಡೆದು ದೇಹವನ್ನು ಅಳಿದುಕೊಳ್ಳುವುದು ಸಹಜ ಮತ್ತು ಅನಿವಾರ್ಯ. ಅದು ಸೃಷ್ಟಿಯ ತಾತ್ವಿಕತೆಯೂ ಹೌದು. ಮನುಷ್ಯನಿಗೆ ಹುಟ್ಟು ಮತ್ತು ಸಾವು ಸೂತಕದ ನೆಲೆಗಳೆ. ಹುಟ್ಟು ಸಂಭ್ರಮವನ್ನು ರೂಪಿಸಿದರೆ ಸಾವು ದು:ಖವನ್ನು ನಿರೂಪಿಸುತ್ತದೆ. ಸಾವು ಯಾವಾಗ ನಮ್ಮನ್ನು ಆಕ್ರಮಿಸುತ್ತದೆ ಅನ್ನೋ ಗೊತ್ತು-ಗುರಿಯ ಮಾಹಿತಿಯು ನಮಗಿಲ್ಲ ಆದರೆ ಸಾವು ಬರುತ್ತದೆ ಅನ್ನೋ ತಿಳುವಳಿಕೆ ಇರುವ ನಾವುಗಳು ಬದುಕು ಕಟ್ಟಿಕೊಂಡಿದ್ದೇವೆ. ಬಿಡಿಸಲಾಗದ ರೋಗವು ದೇಹವನ್ನು ಅಂಟಿಕೊಂಡರೂ ಅದನ್ನು ಹೋಗಲಾಡಿಸಲು ಶತ ಪ್ರಯತ್ನ ಮಾಡುತ್ತೇವೆ. ದುಡಿದ ಹಣದ ಜೊತೆಗೆ ಸಾಲ ಮಾಡಿ ಹಣ ಸುರಿಯುತ್ತೇವೆ. ಕಣ್ಣು, ಹೃದಯ, ಕಿಡ್ನಿಯಂತ ಅಂಗಗಳನ್ನೇ ಕಸಿ ಮಾಡಿ ಬದಲಾಯಿಸಿ ಜೋಡಿಸಿ ದೇಹದಲ್ಲಿ ಜೀವ ಹಿಡಿದುಕೊಂಡು ಬದುಕಲು ಹೋರಾಡುತ್ತೇವೆ. ಜೀವದ ಹಂಗೆ ಬೇಡ ಅಂತ ನೀರಿಗೆ ಬಿದ್ದರೂ ಮುಳುಗಿ ಪ್ರಾಣ ಹೋಗುತ್ತದೆ ಅನ್ನೊ ಭಯದಲ್ಲಿಯೇ ಕಾಪಾಡಿ ಅಂತ ಕೂಗಿ ಕೈ-ಕಾಲು ಬಡಿಯುತ್ತೇವೆ. ಸಾವು ಬರುತ್ತದೆ ಅಂದರೆ ಅದಕ್ಕೆ ಎದುರುಗೊಳ್ಳುವ ಬದಲು ಅದನ್ನು ಮೀರಿ ದಾಟಿ ಬದುಕುವುದು ಹೇಗೆ ಎಂದೇ ಯೋಚಿಸುವ ಮನುಷ್ಯ ಅದಕ್ಕಾಗಿ ಬಗೆ-ಬಗೆಯ ಪ್ರಯತ್ನವನ್ನು ಮಾಡುತ್ತಾನೆ. ವಿಜ್ಞಾನ, ಶಾಸ್ತ್ರ, ಆಧುನಿಕ ತಾಂತ್ರಿಕತೆಗಳು ಎಷ್ಟೇ ಪ್ರಬಲವಾಗಿ ಬೆಳೆದರೂ ಸಾವಿನ ಎಲ್ಲೆಯನ್ನು ಮೀರಿ ಗೆಲ್ಲುವುದಕ್ಕೆ ಸಾಧ್ಯವಾಗಿಲ್ಲ. ಪ್ರತಿ ನಿತ್ಯ ಅದೆಷ್ಟೋ ಜನ ಸಹಜವಾದ ಮತ್ತು ಅಸಜವಾದ ಸಾವು ಕಾಣುತ್ತಿದ್ದಾರೆ ಅನ್ನೋದು ಲೋಕದ ಸತ್ಯ.



ಮನುಷ್ಯ ಹುಟ್ಟಿದ ತರು ವಾಯ ಅವನ ದೇಹಕ್ಕೆ ತಾಳಿಕೆ-ಬಾಳಿಕೆಗಳು ಉಂಟು. ನಾವು ಪುರಾಣ, ಕತೆ, ಹಾಗೂ ಅನೇಕ ಐತಿಹಾಸಿಕ ನೆಲೆಗಳಿಂದ ಹಿಂದೆ ಮನುಷ್ಯ ಇನ್ನೂರು-ಮುನ್ನೂರು ವರ್ಷಗಳು ಬದುಕುತ್ತಿದ್ದ ಅನ್ನೋದನ್ನು ಓದಿದ್ದೇವೆ ಮತ್ತು ಹಿರಿಯರು ಹೇಳಿದನ್ನು ಕೇಳಿದ್ದೇವೆ. ನಮ್ಮ ಅಜ್ಜ-ಮುತ್ತಜ್ಜ, ಅಜ್ಜಿಯರು ನೂರು ವರ್ಷಗಳ ಗಡಿಯನ್ನು ದಾಟಿ ಬದುಕಿದ್ದನ್ನು ನಾವು ನೋಡಿದ್ದೇವೆ ಮತ್ತು ನಮ್ಮ ಪ್ರಜ್ಞೆಯಲ್ಲಿ ಉಂಟು. ಆದರೆ ಈಗ ಐವತ್ತು ವರ್ಷದ ಗಡಿಯನ್ನು ದಾಟಿ ಬದುಕುವುದೇ ಅಸಾಧ್ಯವೇನೋ ಅನ್ನೋ ಹಾಗೆ ಬಹುತೇಕರು ನಲವತ್ತರಿಂದ ಐವತ್ತು ವರ್ಷದ ಒಳಗಿನವರು ಸಾವು ಕಾಣುತ್ತಿರುವುದು ಸಾಮಾನ್ಯವಾಗಿ ಬಿಟ್ಟಿದೆ. ನಮ್ಮ ದೇಹದ ಬಾಳಿಕೆಯು ಪ್ರಮಾಣವು ಐವತ್ತರ ಗಡಿಯನ್ನು ದಾಟುವುದಕ್ಕೆ ವಿಫಲವಾಗುತ್ತಿರುವುದು ಮನುಷ್ಯ ಕುಲದ ಅಳಿವಿನ ಸಂಕೇತವಾಗಿರುವುದನ್ನು ನಾವುಗಳು ಅರ್ಥ ಮಾಡಿಕೊಳ್ಳಬೇಕಾದ ಅಗತ್ಯತೆ ಇದೆ. ಈ ರೀತಿಯ ಆಯಸ್ಸಿನ ದರದಲ್ಲಿ ಇಳಿಮುಖವಾಗುವುದಕ್ಕೆ ಕಾರಣವೇನು? ಎನ್ನುವುದನ್ನು ಯೋಚಿಸಬೇಕಾದ ಅನಿವಾರ್ಯತೆಯೂ ಇದೆ.

ನಾವು ಬದುಕುವ ವಿಧಾನದಲ್ಲಿ ಉಂಟಾಗಿರುವ ಪಲ್ಲಟಗಳು ಬಹು ಮುಖ್ಯವಾಗಿ ತ್ರಾಣ ಮತ್ತು ಪ್ರಾಣದ ನೆಲೆಗಳನ್ನು ಅಲುಗಾಡಿಸಿದೆ ಆದರೆ ನಮಗೆ ಅದರ ಬಗ್ಗೆ ಅಳವಾದ ಪ್ರಜ್ಞೆಯೇ ಹುಟ್ಟಿ ಕೊಂಡಿಲ್ಲ. ಮುಖ್ಯವಾಗಿ ನಾವು ವಾಸಕ್ಕೆ ಮಾಡಿ ಕೊಂಡಿದ್ದ ಮನೆ, ಗುಡಿಸಲು ಎಂಬುದೆಲ್ಲ ಮಣ್ಣು, ಹುಲ್ಲು, ಬಿದಿರು, ಮರದ ಹೊದಿಕೆಯಿಂದ ರೂಪಿಸಿದ ಆಲಯವಾಗಿತ್ತು. ಇದು ಪ್ರಕೃತಿಯ ಅಂಗವೇ ಆಗಿದ್ದ ಕಾರಣ ದೇಹದ ಮೇಲೆ ರೋಗದ ಅಭಿವ್ಯಕ್ತಿಯನ್ನು ಅದು ನೀಡುತ್ತಿರಲಿಲ್ಲ. ಕಳೆದ ದಶಕದಿಂದ ಈಚೆಗೆ ನಮ್ಮ ಮನೆಯ ರಚನೆಯ ಸ್ವರೂಪದಲ್ಲಿ ಸೀಮೆಂಟಿ ನಿಂದ ಹಿಡಿದು ಬೇರೆ-ಬೇರೆಯಾದ ರಸಾಯನಿಕ ವಸ್ತುಗಳನ್ನು ಕೈಗಾರಿಕೆಗಳು ಉತ್ಪಾದಿಸಿ ನೀಡುತ್ತಿರುವ ನೆಲೆಯಿಂದ ಪ್ರಕೃತಿಯ ದತ್ತವಾದ ವಸ್ತುಗಳ ರಹಿತವಾದ ತಾಂತ್ರಿಕ-ಯಾಂತ್ರಿಕ ಸಾಧನಗಳನ್ನು ಒಳಗೊಂಡ ಮನೆಯಲ್ಲಿ ಬದುಕುತ್ತಿದ್ದೇವೆ ಅದರ ತೀವ್ರತೆ ಹೇಗಿದೆ ಅಂದರೆ ಅಡುಗೆ ಮನೆಯ ಪಾತ್ರೆಯಿಂದ ಹಿಡಿದು ಮನೆಯ ಮುಂದಿನ ಹೂವಿನ ಗಿಡಗಳು ಪ್ಲಾಸ್ಟಿಕ್ ಮತ್ತು ಫೈಬರ್‌ನ ರೂಪವಾಗಿರುವುದೇ ನಮ್ಮೊಳಗೆ ರೋಗವನ್ನು ತುಂಬುವುದಕ್ಕೆ ದಾರಿಯಾಗಿದೆ.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper

ದಿನದ ಹಸಿವನ್ನು ನೀಗಿಸುವುದಕ್ಕೆ ಆಹಾರವನ್ನು ತಿನ್ನುವುದು ಮಾತ್ರವಲ್ಲ ದೇಹದ ಪೋಷಣೆಯಲ್ಲೂ ನಾವು ಉಣ್ಣುವ ಪದಾರ್ಥಗಳು ಮಹತ್ವವನ್ನು ಪಡೆಯುತ್ತವೆ. ಪೂರ್ವ ಕಾಲದ ಮನುಷ್ಯನ ಆಹಾರವೆಲ್ಲವು ನೆಲದ ಜನ್ಯವನ್ನು ಒಳಗೊಂಡ ಬೆಂಕಿಯಲ್ಲಿ ಬೇಯಿಸಿದ ಪ್ರಕೃತಿದತ್ತವಾದ ಮತ್ತು ಕಾಲ-ಕಾಲಕ್ಕೆ ಅಗತ್ಯವಾಗಿ ದೇಹಕ್ಕೆ ಬೇಕಾದ ನಾರು-ಬೇರು, ಕಾಯಿ-ಸೊಪ್ಪು, ಮೀನು-ಮಾಂಸವೆಲ್ಲ ಉಣ್ಣುತ್ತಿದ್ದ. ಆಹಾರದ ತಿಳುವಳಿಕೆ ಇದ್ದ ಕಾರಣ ಮಳೆ, ಚಳಿ, ಬಿಸಿಲಿನಲ್ಲಿ ಶರೀರವನ್ನು ಕಾಪಿಟ್ಟುಕೊಳ್ಳುವ ಸಾಮರ್ಥ್ಯವಿತ್ತು. ಭಯಂಕರವಾದ ಜಡ್ಡು ಬಂದರು ಅದನ್ನು ನಿವಾರಿಸಿಕೊಳ್ಳುವುದಕ್ಕೆ ಗಿಡಮೂಲಿಕೆಗಳೆ ಸಾಕಿತ್ತು. ಈಗ ನಮ್ಮ ಆಹಾರ ಪದ್ಧತಿ ಬದಲಾಗಿದೆ ಕೈಗಾರಿಕೆಯ ಉತ್ಪಾದಿತ ವಸ್ತಗಳನ್ನೇ ಬಹುವಾಗಿ ಬಳಸುತ್ತೇವೆ, ಅತಿಯಾದ ಮಾಂಸದ ಊಟ, ಕುಡಿತಗಳು ಒಂದು ಕಡೆಯಾದರೆ ಮನೆಯಲ್ಲಿ ಅಡುಗೆ ಮಾಡದೆ ಹೊಟೆಲಿನಿಂದಲೇ ತಂದು ಉಣ್ಣುವ ಪರಿಪಾಟವು ಅಧಿಕವಾಗಿದೆ. ನಾವು ತಿನ್ನುವ ಆಹಾರಕ್ಕೆ ಕ್ರಮ ಬದ್ಧತೆಯೇ ಇಲ್ಲ. ಬಾಯಿಗೆ ರುಚಿ ಮತ್ತು ಹಸಿವು ಇಂಗಿದರೆ ಸಾಕು. ಏನು ತಿನ್ನಬೇಕು, ತಿನ್ನಬಾರದು ಅನ್ನೋ ಅರಿವು ನಮ್ಮಲ್ಲಿ ಈ ರೀತಿಯ ಜೀವನ ವಿನ್ಯಾಸವು ಸಾವಿನ ಪ್ರಮಾಣವನ್ನು ಅಧಿಕವಾಗಿಸಿದೆ.

ಆಹಾರ ಪದ್ಧತಿ ಮತ್ತು ಜೀವನ ಮೀಮಾಂಸೆಯು ನಮ್ಮ ದೇಹದ ರೂಪವನ್ನು ಬದಲಾಯಿಸಿದೆ. ಬೊಜ್ಜು ಆಪ್ತ ಸಂಗಾತಿಯಾಗಿದೆ. ಅಧಿಕ ತೂಕ, ದೇಹದಲ್ಲಿ ಹಾರ್ಮೋನುಗಳ ತೀವ್ರವಾದ ಬೆಳವಣಿಗೆ ಇತ್ಯಾದಿಗಳು ಆಧುನಿಕ ಬದುಕಿನ ಸೌಂದರ್ಯ ಪ್ರಜ್ಞೆಯನ್ನು ಕಳೆಯುವಂತೆ ಮಾಡಿದೆ. ಈ ನಡುವೆ ಪ್ರತಿಯೊಬ್ಬರೂ ದೇಹವನ್ನು ಜಿಮ್ಮಿನ ಪರಿಸರಕ್ಕೆ ಒಗ್ಗಿಸಿ-ಬಗ್ಗಿಸಿ ಶ್ರಮವಹಿಸುತ್ತಿರುವುದು, ತೂಕ ಇಳಿಸುವುದಕ್ಕೆ ಮತ್ತು ಹೆಚ್ಚಿಸುವುದಕ್ಕೆ ಕೆಲವು ಕಂಪೆನಿಗಳು ನೀಡುವ ಮಾತ್ರೆ, ಪಾನೀಯ, ಪೌಡರ್‌ಗಳನ್ನು ಹಿಂದೆ ಮುಂದೆ ಯೋಚಿಸದೆ ತಿನ್ನುವುದು ಸಹ ನಮ್ಮ ಶರೀರದ ಲಯವನ್ನು ಕಳೆಯುವಂತೆ ಮಾಡಿದೆ ಮತ್ತು ಸಾವಿನ ಹತ್ತಿರಕ್ಕೆ ಪರಿಚಯಿಸಿದೆ.

ದುಡಿಮೆಯ ಪರಿಸರವು ನಮ್ಮ ಗುಣಮಟ್ಟತೆಯನ್ನು ನಿಗದಿ ಮಾಡುವ ಮಾಪಕವು ಆಗಿದನ್ನು ಮರೆಯುವಂತಿಲ್ಲ. ಬಹು ಮುಖ್ಯವಾಗಿ ಮಾನಸಿಕ ಆರೋಗ್ಯ, ನಿದ್ದೆ, ನೆಮ್ಮದಿ ಎನ್ನುವುದೆಲ್ಲ ಬದುಕಿಗೆ ಪ್ರಧಾನವಾಗಿದೆ. ಆದರೆ ನಮ್ಮ ಅಗತ್ಯತೆಗಳು ಹಣ, ಸಾಲ, ಗುಣಮಟ್ಟತೆಯ ಬದುಕಿಗೆ ದುಡಿಮೆಯೇ ಪ್ರಧಾನವಾಗಿದೆ. ಈ ದುಡಿಮೆಗೆ ರಾತ್ರಿ ಮತ್ತು ಹಗಲು ಎನ್ನುವ ಮಿತಿ ಇಲ್ಲದಾಗಿದೆ. ವಿಪರೀತ ಒತ್ತಡಗಳು ಮನಸ್ಸಿನ ಮೇಲೆ ನಿಲ್ಲುತ್ತಿರುವುದು ಒಂದು ಕಡೆಯಾದರೆ ಕುಟುಂಬ, ಸಮಾಜ, ದುಡಿಮೆ ಪರಿಸರದ ಕಿರಿಕಿರಿಗಳು ಬಹುತೇಕರನ್ನು ಘಾಸಿ ಮಾಡಿದೆ ಎನ್ನುವುದು ಸತ್ಯ. ನಾವು ಬದುಕಬೇಕು ಮನುಷ್ಯನ ಪೀಳಿಗೆಯು ಈ ನೆಲದಲ್ಲಿ ಮುಂದುವರಿಯಾಬೇಕು ದೇಹದ ಬಾಳಿಕೆ ಪ್ರಮಾಣ ಅಧಿಕವಾಗ ಬೇಕಾದರೆ ನಾವೆಲ್ಲ ಆಧುನಿಕ ಬದುಕಿನ ಮಾದರಿಗಳನ್ನು ಮೆಲ್ಲಗೆ ಕೈಬಿಟ್ಟು ನೆಲಮುಖಿಯಾದ ಜೀವನ ವಿನ್ಯಾಸದ ಕಡೆಗೆ ನಡೆಯಬೇಕಾದ ಅಗತ್ಯತೆ ಉಂಟು ತಪ್ಪಿದಲ್ಲಿ ಸಾವು ನಮ್ಮ ಹುಟ್ಟಿನ ಬಗಲಿನಲ್ಲಿಯೇ ಚಲನೆ ಪಡೆಯುತ್ತದೆ ಎನ್ನುವುದನ್ನು ಯಾರು ಮರೆಯಬಾರದು.

# ಗಂಭೀರ ಆರೋಗ್ಯ ಸಮಸ್ಯೆಗಳ ಪತ್ತೆಗಾಗಿ ಎಲ್ಲ ಆರೋಗ್ಯ ಕೇಂದ್ರಗಳಲ್ಲಿನ ಇಸಿಜಿ ಯಂತ್ರಗಳ ಸದುಪಯೋಗ ಪಡೆಯಿರಿ : ಡಿಎಚ್‌ಓ

■ **ಹಂಪಿ ಟೈಮ್ಸ್ ಬಳ್ಳಾರಿ**

ವ್ಯಕ್ತಿಗೆ ಆಕಸ್ಮಿಕವಾಗಿ ಒದಗುವ ಆರೋಗ್ಯದ ಸಮಸ್ಯೆಗಳನ್ನು ಗುರ್ತಿಸಲು ಇಸಿಜಿ ಮಷಿನ್ ಅತ್ಯಂತ ಮಹತ್ವದ್ದಾಗಿದ್ದು, ಅದರಲ್ಲೂ ಮುಖ್ಯವಾಗಿ ಹೃದಯದ ಮೌಲ್ಯಮಾಪನ ಮಾಡುವ ಮೂಲಕ ಅತ್ಯಂತ ಸರಳವಾಗಿ ಮತ್ತು ವೇಗವಾಗಿ ಪರೀಕ್ಷಿಸಿ ಹೃದಯದ ಸಮಸ್ಯೆ ಹಾಗೂ ಆರೋಗ್ಯವನ್ನು ಮೇಲ್ವಿಚಾರಣೆ ಮಾಡುವ ಇಸಿಜಿ ಯಂತ್ರಗಳ ಗ್ರಾಮೀಣ ಜನತೆಯು ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಸೋಮವಾರ ಕಂಪ್ಲಿ ತಾಲೂಕಿನ ಎಮ್ಮಿಗನೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇಸಿಜಿ ಮೂಲಕ ವ್ಯಕ್ತಿಯ ಆರೋಗ್ಯ ಪರೀಕ್ಷಾ ಕಾರ್ಯ ಪರಿಶೀಲಿಸಿ ಅವರು ಮಾತನಾಡಿದರು.



ಜಿಲ್ಲೆಯಾದ್ಯಂತ 2 ತಾಲ್ಲೂಕು ಆಸ್ಪತ್ರೆ, 6 ಸಮುದಾಯ ಆರೋಗ್ಯ ಕೇಂದ್ರ, 29 ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು 09 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇಸಿಜಿ ಮೆಷಿನ್ ಲಭ್ಯವಿದ್ದು, ಇಲ್ಲಿ ತಜ್ಞರು ಹಾಗೂ ತರಬೇತಿ ಪಡೆದ ವೈದ್ಯರು ಪರೀಕ್ಷೆ ಮಾಡಲು ಅವಕಾಶ ಮಾಡಲಾಗಿದೆ ಎಂದರು.

**ಯಾವ ಲಕ್ಷಣಗಳಿಗೆ ಇಸಿಜಿ ಮಾಡಿಸಬೇಕು?**

ಎದೆ ನೋವು, ತಲೆತಿರುಗುವಿಕೆ, ತಲೆತಿರುಗುವಿಕೆ ಅಥವಾ ಗೊಂದಲ, ಹೃದಯ ಬಡಿತ ಏರಿಳಿತ, ತ್ವರಿತ ನಾಡಿಮಿಡಿತ, ಉಸಿರಾಟದ ತೊಂದರೆ, ದೌರ್ಬಲ್ಯ, ಆಯಾಸ, ಅಥವಾ ವ್ಯಾಯಾಮ ಮಾಡುವ ಸಾಮರ್ಥ್ಯ ಕಡಿಮೆಯಾಗುವುದು.

**ಇಸಿಜಿಯಿಂದ ಸ್ಥಳದಲ್ಲಿಯೇ ಗುರ್ತಿಸಬಹುದಾದ ಸಮಸ್ಯೆಗಳು:** ಹೃದಯದಲ್ಲಿ ನಿರ್ಬಂಧಿಸಲಾದ ಅಥವಾ ಕಿರಿದಾದ ಅಪಧಮನಿಗಳು (ಕರೋನರಿ ಅಪಧಮನಿ ಕಾಯಿಲೆ) ಎದೆ ನೋವು ಅಥವಾ ಹೃದಯಾಘಾತಕ್ಕೆ ಕಾರಣವಾಗಿದ್ದರೆ. ಈ ಹಿಂದೆ ಹೃದಯಾಘಾತ ವಾಗಿದ್ದರೆ, ಪೇಸ್‌ಮೇಕರ್ ನಂತಹ ನಿರ್ದಿಷ್ಟ ಹೃದಯ ಕಾಯಿಲೆ ಚಿಕಿತ್ಸೆಯ ಕಾರ್ಯನಿರ್ವಹಣೆ, ಅನಿಯಮಿತ ಹೃದಯ ಬಡಿತಗಳು (ಆರ್ಹೆತ್ಮಿಯಾ).

**ಟೆಲಿ ಐಸಿಯು ಹಬ್ ಮೂಲಕ ಜಿಲ್ಲೆಯಲ್ಲಿ ಅನೂಕೂಲ:** ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ತಪಾಸಣೆ ಮಾಡಿದಾಗ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ತಕ್ಷಣ ತಾಲೂಕು ಮಟ್ಟದ ಅಸ್ಪತ್ರೆಗೆ ದಾಖಲಿಸಿ, ಅಲ್ಲಿಯ ತಜ್ಞರು ಜಿಲ್ಲಾ ಆಸ್ಪತ್ರೆಯಲ್ಲಿ ಅಳವಡಿಸಿರುವ ಟೆಲಿ ಐಸಿಯು ಹಬ್‌ನ ತಜ್ಞವೈದ್ಯರಿಗೆ ನೇರವಾಗಿ ರೋಗಿಯನ್ನು ವಿಡಿಯೋ ಮುಲಕ ಸಂಪರ್ಕಿಸಿ ಚಿಕಿತ್ಸೆ ಒದಗಿಸಲು ಅಥವಾ ತುರ್ತು ಅಗತ್ಯವೆನಿಸಿದರೆ ಜಿಲ್ಲಾ ಆಸ್ಪತ್ರೆ ಅಥವಾ ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರ ಕ್ಕೆ ದಾಖಲಿಸಲು ಸಹಕಾರಿಯಾಗಿ ವ್ಯಕ್ತಿಯ ಜೀವ ಉಳಿಸಲು ಸಹಾಯಕವಾಗಿದೆ. ಈ ಹಿನ್ನಲೆಯಲ್ಲಿ ಸಾರ್ವಜನಿಕರು ಜಿಲ್ಲೆಯ ಎಲ್ಲ ಆಸ್ಪತ್ರೆಗಳಲ್ಲಿ ಲಭ್ಯವಿರುವ ಇಸಿಜಿ ಮೆಷಿನ್‌ಗಳ ಸದುಪಯೋಗ ಪಡೆಯಲು ವಿನಂತಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಆರ್.ಅಬ್ದುಲ್, ಅಡಳಿತ ವೈದ್ಯಾಧಿಕಾರಿ ಡಾ.ಫಾರೂಖ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಅರೋಗ್ಯ ನಿರೀಕ್ಷಣಾಧಿಕಾರಿ ಬಸವನಗೌಡ, ಕೃಷ್ಣಮೂರ್ತಿ, ಸಿಬ್ಬಂದಿಯವರಾದ ಪೂಜಾ, ಉಮಾಮಹೇಶ್ವರಿ, ಕನಕಪ್ಪ, ಅಶ್ವಿನಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಬಸವೇಶ್ವರರು ಪ್ರತಿಪಾದಿಸಿದ ತಾತ್ವಿಕ ವಿಚಾರಗಳು

■ ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ.



ಜಗಜ್ಯೋತಿ ಬಸವೇಶ್ವರರು ಭಾರತದ ಪ್ರಮುಖ ಸಮಾಜ ಸುಧಾರಕರಲ್ಲಿ ಒಬ್ಬರು. ತಮ್ಮ ಆಚಾರ-ವಿಚಾರ, ನಡೆ-ನುಡಿಗಳ ಮೂಲಕ ಲೋಕಕ್ಕೆ ಮಾದರಿ ಎನಿಸಿಕೊಂಡವರು. ಕಾಯಕ ತತ್ವ, ದಾಸೋಹ ತತ್ವ, ಜಾತ್ಯತೀತ ತತ್ವ,ಸಮಾನತೆ ತತ್ವ ಇವೆ ಮೊದಲಾದ ತಾತ್ವಿಕ ವಿಚಾರಧಾರೆಗಳ ಮೂಲಕ ಆದರ್ಶಪ್ರಾಯರಾಗಿದ್ದಾರೆ. "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ" ಎಂಬ ಆದರ್ಶ ಜೀವನಕ್ಕೆ ಅತ್ಯಗತ್ಯವಾದ "ಸಪ್ತಸೂತ್ರಗಳ" ಪ್ರತಿಪಾದಕರಾಗಿದ್ದಾರೆ.

ಕಾಯಕವೇ ಕೈಲಾಸ,ಸಕಲ ಜೀವಾತ್ಮರಿಗೆ ಲೇಸ ಬಯಸುವವನೇ ನಿಜವಾದ ಕುಲಜ,ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ,ಪರಸ್ತ್ರೀ ಪರಧನವೆಂಬ ಜೂಬಿಗಂಜುವೇ ಮುಂತಾದ ಅವರ ಚಿಂತನೆಗಳು ಸಾರ್ವಕಾಲಿಕ ಸತ್ಯವಾಗಿವೆ.

ವಚನ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸಿದ ಕೀರ್ತಿ ಬಸವಣ್ಣನವರದ್ದಾಗಿದೆ. ಜನಸಾಮಾನ್ಯರಿಗೆ ಅರ್ಥವಾಗುವ ಸರಳ ಕನ್ನಡ ಭಾಷೆಯಲ್ಲಿ ವಚನಗಳನ್ನು ರಚಿಸುವ ಮೂಲಕ ಸಾಹಿತ್ಯವನ್ನು ಜನಸಾಮಾನ್ಯರ ಬಳಿಗೆ ತಂದ ಕೀರ್ತಿ ಬಸವೇಶ್ವರರಿಗೆ ಸಲ್ಲುತ್ತದೆ.

ಪ್ರತಿಯೊಬ್ಬ ವ್ಯಕ್ತಿಯೂ ಸ್ವತಂತ್ರ, ನಿರ್ಭೀತ ಮತ್ತು ಸ್ವಾವಲಂಬಿ ಬದುಕನ್ನು ಸಾಗಿಸಬೇಕೆಂಬ ಉದ್ದೇಶದಿಂದ ಬಸವಣ್ಣನವರು ಕಾಯಕದ ಮಾರ್ಗವನ್ನು ಅನುಸರಿಸಲು ತಿಳಿಸಿದರು.'ಕಾಯ' ಎಂದರೆ ದೇಹ.'ಕಾಯಕ' ಎಂದರೆ 'ದೈಹಿಕ ಶ್ರಮದಿಂದೊಡಗೂಡಿದ ಕಾರ್ಯ'ಎಂದರ್ಥ. ಯಾವ ವ್ಯಕ್ತಿಯೂ ಆಲಸಿಯಾಗಿ, ಬೇರೊಬ್ಬರ ಮೇಲೆ ಅವಲಂಬಿತನಾಗಿ ಬದುಕಬಾರದು ಎಂಬುದು ಬಸವೇಶ್ವರರ ನಿಲುವಾಗಿದೆ.

**"ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚ**
**ಶರಣರ ಕಂಡರೆ ನಿಶ್ಚಯವಾಗಿಯೂ**
**ಕೂಡಲಸಂಗಯ್ಯನೆಂಬೆ."**

ಎಂಬ ಇವರ ವಚನ ಕಾಯಕದ ಮಹತ್ತನ್ನು ತಿಳಿಸುವುದಲ್ಲದೆ,ಯಾರು ನಿಯತ್ತಿನಿಂದ ದುಡಿದು ಬದುಕು ಸಾಗಿಸುವರೋ ಅವರನ್ನು ನಿಜವಾಗಿಯೂ ಕೂಡಲಸಂಗಯ್ಯನೆಂದು ಭಾವಿಸುವುದಾಗಿ ತಿಳಿಸಿದ್ದಾರೆ. ಕಾಯಕದಲ್ಲಿ ಶ್ರದ್ಧೆ ಮತ್ತು ನಿಷ್ಠೆ ಇರಬೇಕು.ಸತ್ಯ ಶುದ್ಧ ಕಾಯಕವನ್ನು ಮಾಡುವ ವ್ಯಕ್ತಿ ಆದರ್ಶಪ್ರಾಯನೆನಿಸಿಕೊಳ್ಳುವನು.ಅಂತಹ ಕಾಯಕವೇ ಕೈಲಾಸವೆನಿಸಿಕೊಳ್ಳುವುದು ಎಂದು ಪ್ರತಿಪಾದಿಸಿದ್ದಾರೆ. ಯಾವ ಕಾಯಕವೂ ಮೇಲಲ್ಲ. ಯಾವ ಕಾಯಕವೂ ಕೀಳಲ್ಲ ಎಂಬುದು ಬಸವೇಶ್ವರರ ಪ್ರತಿಪಾದನೆಯಾಗಿದೆ. ವಾಮಮಾರ್ಗದ ಮೂಲಕ ಸಂಪತ್ತಿನ ಕ್ರೂಢೀಕರಣ ಒಪ್ಪಿತವಾದುದಲ್ಲ. ದುಡಿಮೆಯ ಕೆಲ ಭಾಗವನ್ನಾದರೂ ಸಮಾಜದ ಜನರಿಗೆ ನೀಡಬೇಕು. ಇದನ್ನೇ ಬಸವಣ್ಣನವರು "ದಾಸೋಹ" ಎಂದು ಕರೆದರು. ಪ್ರತಿಯೊಬ್ಬ ಶರಣನು ತಾನು ಪ್ರಾಮಾಣಿಕವಾಗಿ ದುಡಿದು ತಂದ ಸಂಪತ್ತನ್ನು ಅವಶ್ಯವಿದ್ದಷ್ಟು ಮಾತ್ರ ಉಪಯೋಗಿಸಿ, ಉಳಿದದ್ದನ್ನು ದಾಸೋಹಕ್ಕೆ ನೀಡಬೇಕೆಂಬುದು ಶರಣ ತತ್ವ. ಮನುಷ್ಯ ತನ್ನ ತಪ್ಪನ್ನು ನೋಡದೆ ಬೇರೆಯವರ ಸಣ್ಣ ತಪ್ಪನ್ನೇ ದೊಡ್ಡದು ಮಾಡುತ್ತಾನೆ. ಇಂಥ ಸ್ವಭಾವದವರಿಗೆ ಬಸವಣ್ಣನವರ ಈ ವಚನ ಚಾಟಿ ಏಟಿನಂತೆ ಚುರುಕು ಮುಟ್ಟಿಸುತ್ತದೆ.

**ಲೋಕದ ಡೊಂಕ ನೀವೇಕೆ ತಿದ್ದುವಿರಿ**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ**
**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ**
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ನಮ್ಮ ಕೂಡಲಸಂಗಮದೇವ.

ಬೇರೆಯವರಿಗೆ ಉಪದೇಶ ಮಾಡುವುದಕ್ಕಿಂತ ತನ್ನನ್ನು ತಾನು ತಿದ್ದಿಕೊಂಡು ತನ್ನ ಜೀವನದ ಆಗುಹೋಗುಗಳ ಬಗ್ಗೆ ಎಚ್ಚರದಿಂದಿದ್ದು, ಕಾರ್ಯಪ್ರವೃತ್ತನಾಗಿರುವವನು ಮಾತ್ರ ಪರರಿಗೆ ಉಪದೇಶಿಸಲು ಅರ್ಹನು. ಆದುದರಿಂದ ಲೋಕೋದ್ಧಾರ ಮಾಡುವ ಸದಾಶಯ ಉಳ್ಳವನು ಮೊದಲು ತನ್ನ ಡೊಂಕನ್ನು ತಿದ್ದಿಕೊಳ್ಳಬೇಕೆಂಬುದು ಈ ವಚನದ ಆಶಯವಾಗಿದೆ.

**ದೇವಲೋಕ ಮರ್ತ್ಯಲೋಕ ಬೇರಿಲ್ಲ ಕಾಣಿರೋ**
**ಸತ್ಯ ನುಡಿಯುವುದೇ ದೇವಲೋಕ**
**ಮಿಥ್ಯ ನುಡಿಯುವುದೇ ಮರ್ತ್ಯಲೋಕ**
**ಆಚಾರವೇ ಸ್ವರ್ಗ ಅನಾಚಾರವೇ ನರಕ**

ಎಂದು ಹೇಳುವ ಮೂಲಕ ಮಾತು ಕೃತಿಗಳ ನಡುವೆ ಇರಬೇಕಾದ ಸಾಮರಸ್ಯವನ್ನು ಒತ್ತಿ ಹೇಳಿದ್ದಾರೆ. ಸತ್ಯದ ನುಡಿಗಳು ನಾವಿರುವ ಜಾಗವನ್ನು ದೇವಲೋಕವನ್ನಾಗಿ ರೂಪಿಸುವುದು. ಸುಳ್ಳಿನ ನುಡಿಗಳು ತಾನಿರುವ ಜಾಗವನ್ನೇ ಮರ್ತ್ಯಲೋಕವನ್ನಾಗಿ ಸೃಷ್ಟಿಸುವವು. ಹಾಗಾಗಿ ಸದಾಚಾರವೇ ಸ್ವರ್ಗ. ಅನಾಚಾರವೇ ನರಕ ಎಂಬುದು ಬಸವಣ್ಣನವರ ಅಭಿಮತ.



ಮನುಷ್ಯ ತಾನಾಡುವ ಮಾತು ಹೇಗಿರಬೇಕೆಂದರೆ ಲಿಂಗವು ಸಹಿತ ಮೆಚ್ಚಿ ಅಹುದು ಅಹುದು ಎನ್ನುವಂತಿರಬೇಕೆಂಬುದು ಬಸವಣ್ಣನವರ ಅಭಿಪ್ರಾಯವಾಗಿದೆ. ಹೀಗಾಗಿಯೇ ಮಾತಿನ ಮಹತ್ತನ್ನು ಕುರಿತು ತಮ್ಮ ಒಂದು ವಚನದಲ್ಲಿ ಬಸವೇಶ್ವರರು ಹೀಗೆ ಹೇಳಿದ್ದಾರೆ.

**ನುಡಿದರೆ ಮುತ್ತಿನ ಹಾರದಂತಿರಬೇಕು**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು**
**ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು**
**ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು**
ನುಡಿಯೊಳಗಾಗಿ ನಡೆಯದಿರ್ದಡೆ ಕೂಡಲಸಂಗಯ್ಯನ 'ಂತೊಲಿವನಯ್ಯ ಎಂದು ಮಾತಿನ ಮಹತ್ತನ್ನು ತಿಳಿಸಿದ್ದಾರೆ.

ಮನೆಗೆ ಬಂದವರನ್ನು ನೋಡಿಯೂ ನೋಡದಂತೆ ಇರುವವರನ್ನು, ಮಾತನಾಡಿಸದಂತೆ ಉದಾಸೀನ ಮಾಡುವವರನ್ನು ಕುರಿತು ಬಸವಣ್ಣನವರು,

**"ಏನಿ ಬಂದಿರಿ, ಹದುಳವಿದ್ದಿರೆ? ಎಂದರೆ**
**ನಿಮ್ಮ ಮೈಸಿರಿ ಹಾರಿಹೋಹುದೆ?**
**ಕುಳ್ಳಿರೆಂದರೆ, ನೆಲ ಕುಳಿಹೋಹುದೆ?**
**ಒಡನೆ ನುಡಿದರೆ ಶಿರ-ಹೊಟ್ಟೆಯೊಡೆವುದೆ?**
**ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ,**
**ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ**
**ಕೂಡಲಸಂಗಮದೇವನು?"**

ಮನುಷ್ಯನ ಪ್ರೀತಿಯ ಮಾತುಗಳ ಕೊರತೆಯಿಂದಾಗಿಯೇ ಮನುಷ್ಯ ಏಕಾಂಗಿತನ ಅನುಭವಿಸುವಂತಾಗಿದೆ ಮತ್ತು ಸಂಬಂಧಗಳ ಸಡಿಲಕ್ಕೆ ಕಾರಣವಾಗಿದೆ ಎಂಬ ಎಚ್ಚರಿಕೆಯನ್ನು ನೀಡುವ ಮೂಲಕ ಮನೆಗೆ ಬಂದ ಅತಿಥಿಗಳ ಜೊತೆ ಆತ್ಮೀಯವಾಗಿ ಮಾತನಾಡಬೇಕೆಂದು ತಿಳಿಸಿದ್ದಾರೆ.

ಬಸವಣ್ಣನವರು ದೇಹವನ್ನೇ ದೇವಾಲಯವೆಂದು ಪ್ರತಿಪಾದಿಸಿದ್ದಾರೆ. ಅವರ ಒಂದು ವಚನವು ಹೀಗಿದೆ.

**ಉಳ್ಳವರು ಶಿವಾಲಯವ ಮಾಡುವರು**
**ನಾನೇನ ಮಾಡಲಿ ಬಡವನಯ್ಯ**
**ಎನ್ನ ಕಾಲೇ ಕಂಬ ದೇಹವೇ ದೇಗುಲ**
**ಶಿರವೇ ಹೊನ್ನ ಕಳಶವಯ್ಯ....**

ಒಟ್ಟಿನಲ್ಲಿ ಯಾವ ತರ-ತಮ ಭಾವಗಳಿಲ್ಲದೆ ಪ್ರತಿಯೊಬ್ಬರೂ ತಮ್ಮ ವಿಚಾರಗಳನ್ನ ಅಭಿವ್ಯಕ್ತಿಸಲು ಅನುಭವ ಮಂಟಪ ಮುಕ್ತ ಸಂವಾದದ ಮಹತ್ವದ ವೇದಿಕೆಯಾಗಿತ್ತು. ಸಮಾಜದ ಸಾಮಾನ್ಯನೂ ಕೂಡ ಮೇಲೆ ಬರಬೇಕೆಂಬುದೇ ಅವರ ಆಶಯವಾಗಿತ್ತು.

ಸಾಮಾಜಿಕ ಸಮಾನತೆಯ ಬಗೆಗೆ ಬಸವಣ್ಣನವರ ಚಿಂತನೆಗಳುಮಾರ್ಮಿಕಮತ್ತುಅನುಕರಣೀಯವಾಗಿವೆ. ಜಾತ್ಯತೀತ ಸಮಾಜ ಹಾಗೂ ಸಮಾಜವಾದಿ ಮಾದರಿಯ ಸಮಾಜವನ್ನು ಕಟ್ಟುವ ಬಗೆಯನ್ನು ಬಸವೇಶ್ವರರು ಹನ್ನೆರಡನೇ ಶತಮಾನದಲ್ಲಿಯೇ ತೋರಿಸಿಕೊಟ್ಟಿದ್ದಾರೆ. ಮಹಿಳೆಯರ ಸ್ಥಾನಮಾನಗಳ ಸುಧಾರಣೆಗಾಗಿ ಬಸವಣ್ಣನವರ ಪ್ರಯತ್ನವನ್ನು ಮರೆಯಲಾಗದು. ■

# ಮೂದಲಿಸುತ್ತಿದ್ದವರನ್ನು ಮೆಟ್ಟಿನಿಂತ ಗಟ್ಟಿಗಿತ್ತಿ ಲೀಲಾ ಸಿದ್ದಿ

## ಕ್ರೀಡಾ ತರಬೇತಿ ಕೇಂದ್ರಗಳನ್ನು ಇನ್ನಷ್ಟು ಮೇಲ್ದರ್ಜೆಗೇರಿಸಿ ತರಬೇತಿ ನೀಡುವ ಅಗತ್ಯವಿದೆ

ಸಿದ್ದಿ ಜನಾಂಗದ ಮಹಿಳೆಯರು ನೋಡಲು ಗಂಡಸರಂತೆ ಕಾಣುವುದು ಪ್ರಕೃತಿಯ ಸಹಜತೆ ಅದನ್ನು ಕಂಡು ಮೂದಲಿಸುತ್ತಿದ್ದವರನ್ನು ಮೆಟ್ಟಿನಿಂತ ಗಟ್ಟಿಗಿತ್ತಿ ಲೀಲಾ ಸಿದ್ದಿ.

ಕುಸ್ತಿಯೇ ನನಗೆ ಎಲ್ಲಾ ಕುಸ್ತಿಯನ್ನು ಬಿಟ್ಟು ಬೇರೇನು ಇಲ್ಲ ಇಂದು ಕುಸ್ತಿ ಕ್ರೀಡೆಯ ಕೃಷಿಯಿಂದ ಅನ್ನ ಸಿಕ್ಕಿದೆ ಎಂದು ಹೆಮ್ಮೆಯಿಂದ ನುಡಿಯುತ್ತಾರೆ ರಾಷ್ಟ್ರಮಟ್ಟದ ಮಹಿಳಾ ಕುಸ್ತಿಪಟು ಲೀನಾ ಸಿದ್ದಿ.

ರೈತಾಪಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದ ಅಂತೋಣಿಸಿದ್ದಿ ಮತ್ತು ಸುಶೀಲ ಇವರ ಮಗಳಾಗಿ ಹಳಿಯಾಳದ ದೊಡ್ಡ ಕೊಪ್ಪ ಇಲ್ಲಿ ಜನಿಸಿ 05ನೇ ತರಗತಿ ಓದುವಾಗ ಕುಸ್ತಿ ತರಬೇತುದಾರರಾದ ಮಂಜುನಾಥ್ ಇವರ ಸಹಕಾರದೊಂದಿಗೆ ಡಿವೈಇಎಸ್ ಕುಸ್ತಿ ಹಾಸ್ಟೇಲ್ನಲ್ಲಿ ತರಬೇತಿ ಪಡೆಯಲು ಆರಂಭಿಸುತ್ತಾರೆ ಮುಂದೆ ಬಾಲಕೃಷ್ಣ ದಡ್ಡಿ, ಕಾಡೇಶ್ ಮತ್ತು ತುಕಾರಾಂ ಇವರಿಂದ ಕುಸ್ತಿ ಕೌಶಲ್ಯಗಳನ್ನು ಅಭ್ಯಾಸ ಮಾಡಿರುತ್ತಾರೆ.

ಮೂಲತಃ ಯಾವುದೇ ಕುಸ್ತಿ ಹಿನ್ನಲೆ ಇಲ್ಲದ ಇವರು ಇಂದು ಕರ್ನಾಟಕ ಮಹಿಳಾ ಕುಸ್ತಿಪಟುಗಳಲ್ಲಿ ತನ್ನದೇ ಹೆಸರನ್ನುಗಳಿಸಿ ರಾಷ್ಟ್ರಮಟ್ಟಗಳಲ್ಲಿ ಪದಕ ಪಡೆದು ಕ್ರೀಡಾಕೂಟದಡಿ ಪೊಲೀಸ್ ಕಾನ್ಸ್ಟೇಬಲ್ ಆಗಿ ಹುದ್ದೆ ಪಡೆದು ಬೆಂಗಳೂರಿನ ವರ್ತೂರು ಪೊಲೀಸ್ ಸ್ಟೇಷನ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಾ ದಾವಣಗೆರೆ ಕ್ರೀಡಾ ಹಾಸ್ಟೆಲ್ ನಲ್ಲಿ ಕುಸ್ತಿ ತರಬೇತಿಯನ್ನು ಮುಂದುವರಿಸುತ್ತಿದ್ದಾರೆ.

ತಂದೆಯವರು ಸಾಕಷ್ಟು ಕಷ್ಟಪಟ್ಟು ನಮ್ಮನ್ನು ಸಾಕಿದ್ದಾರೆ ಈಗ ಇಲಾಖೆಯಲ್ಲಿ ಸಂಬಳ ಬರುತ್ತಿರುವುದು ನನ್ನ ಖರ್ಚುಗಳಿಗೆ ಅನುಕೂಲವಾಗಿದೆ ಈ ಹಿಂದೆ ಬಯಲು ಕುಸ್ತಿಗಳನ್ನು ಆಡಿ ಬಂದಂತಹ ಅಲ್ಪ ಸ್ವಲ್ಪ ಹಣದಲ್ಲಿ ನನ್ನ ಕ್ರೀಡೆಗೆ ಬೇಕಾದ ಪರಿಕರಗಳನ್ನು ತೆಗೆದುಕೊಂಡು ಸಾಧಿಸಿ ತೋರಿಸಿದ್ದೇನೆ ಮುಂಬರುವ ಕ್ರೀಡಾಪಟುಗಳು ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಬಳಸಿಕೊಂಡು ಹೆಚ್ಚಿನ ಸಾಧನೆ ಮಾಡಬೇಕು ಎಂದು ತಿಳಿಸುತ್ತಾ ಕರ್ನಾಟಕ ಸರ್ಕಾರ ನಮ್ಮಂತ ಅದೆಷ್ಟೋ ಕುಸ್ತಿಪಟುಗಳು ಸಾಧನೆ ಮಾಡಿ ನೌಕರಿಯಿಂದ ವಂಚಿತರಾಗಿದ್ದಾರೆ ಅವರನ್ನು ಗುರುತಿಸಿ ಉದ್ಯೋಗ ನೀಡಬೇಕು ಕ್ರೀಡಾ ತರಬೇತಿ ಕೇಂದ್ರಗಳನ್ನು ಇನ್ನಷ್ಟು ಮೇಲ್ದರ್ಜೆಗೇರಿಸಿ ತರಬೇತಿ ನೀಡಬೇಕು ಹಾಗೂ ತರಬೇತುದಾರರಿಗೆ ಹೆಚ್ಚಿನ ಮಟ್ಟದ ವಿಶೇಷ ತರಬೇತಿಗಳನ್ನು ನೀಡಿ ವೈಜ್ಞಾನಿಕ ಪದ್ಧತಿಅಳವಡಿಸಿಕೊಳ್ಳುವಂತೆ ಸಹಕಾರ ನೀಡಬೇಕೆಂದು ವಿನಂತಿಸುತ್ತಾರೆ.

ಪೋಷಕರು ತಮ್ಮ ಮಕ್ಕಳಿಗೆ ಆಸಕ್ತಿ ಇರುವ ಕ್ರೀಡೆಯಲ್ಲಿ ಸಂಪೂರ್ಣ ವಾಗಿ ತೊಡಗಿಸಿಕೊಳ್ಳಲು ಸಹಕಾರ ನೀಡಬೇಕು ಆ ಮೂಲಕ ಮಕ್ಕಳನ್ನು ದೈಹಿಕ ಮತ್ತು ಮಾನಸಿಕವಾಗಿ ಸದೃಢರಾಗಿಸಿ ಎಂದು ಕೇಳಿಕೊಳ್ಳುತ್ತಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381
Scan For Digital Colourful
HAMPI TIMES E-paper




ಇಲ್ಲಿಯವರೆಗೂ ತರಬೇತಿ ನೀಡಿದ ಎಲ್ಲಾ ಕುಸ್ತಿ ತರಬೇತುದಾರರಿಗೆ, ಪೊಲೀಸ್ ಇಲಾಖೆಯ ಎಲ್ಲಾ ಅಧಿಕಾರಿ ವರ್ಗದವರಿಗೂ, ಕೈ ತಟ್ಟಿ, ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಎಲ್ಲಾ ಕುಸ್ತಿ ಪ್ರೇಮಿಗಳಿಗೂ, ಸಹಕರಿಸಿದ ಸಂಘ ಸಂಸ್ಥೆಗಳಿಗೂ, ರಾಜಕೀಯ ನಾಯಕರಿಗೂ ಹಾಗೂ ನನ್ನೆಲ್ಲಾ ಕುಟುಂಬ ವರ್ಗದವರಿಗೂ ನಾನೆಂದೂ ಚಿರಋಣಿ ಎಂದು ತಿಳಿಸುತ್ತಾರೆ ಕುಸ್ತಿ ಸಾಧಕಿ ಸಿದ್ದಿ.

ಕಾಲು ನೋವಿನಿಂದ ಕೆಲವು ವರ್ಷಗಳ ಕಾಲ ತರಬೇತಿಯನ್ನು ಮುಂದುವರೆಸಲು ಸಾಧ್ಯವಾಗಲಿಲ್ಲ ಈಗ ಮತ್ತೆ ಪುನಃ ಆರಂಭಿಸಿದ್ದೇನೆ ನನ್ನ ಗುರಿ ಒಲಂಪಿಕ್ಸ್ ನಲ್ಲಿ ಪದಕ ಪಡೆದು ರಾಷ್ಟ್ರಕ್ಕೆ ಕೀರ್ತಿ ತರಬೇಕು ನಮ್ಮ ತಂದೆಯವರಿಗೆ ಸುಶೀಲ್ ಕುಮಾರ್ ಅವರು ಪದಕ ಪಡೆದರಲ್ಲ ಅದೇ ರೀತಿ ನೀನು ಪಡೆಯಬೇಕು ಎಂಬುದೇ ನನ್ನ ಆಸೆಯೆಂದು ಸದಾಕಾಲ ತಿಳಿಸುತ್ತಾರೆ ಅವರ ಆಸೆಯನ್ನು ನೆರವೇರಿಸುವುದೇ ನನ್ನ ಗುರಿ ಎನ್ನುತ್ತಾರೆ ಲೀನಾ.

ಸರಿಯಾದ ರೀತಿಯಲ್ಲಿ ತರಬೇತು ಪಡೆದರೆ ಯಾವುದೇ ಕ್ರೀಡೆಯಾಗಲಿ ಕೈ ಕೊಡುವುದಿಲ್ಲ ಅದು ಕೈಹಿಡಿದು ನಿಮ್ಮನ್ನು ಮೇಲಕ್ಕೆತ್ತುತ್ತದೆ ತಾಳ್ಮೆ, ಶ್ರದ್ಧೆ ಇರಬೇಕು ಎಂದು ತಿಳಿಸುತ್ತಾರೆ. ಕ್ರೀಡಾ ಸಾಧನೆಯ ಕನಸುಗಳು ನನಸಾಗಲೆಂದು ಹಾರೈಸುತ್ತೇವೆ.

### ಕ್ರೀಡಾ ಸಾಧನೆ ಮತ್ತು ಪ್ರಶಸ್ತಿಗಳು

**2017(ಆಂಧ್ರ ಪ್ರದೇಶ ಆಂಧ್ರಪ್ರದೇಶ)ಸೌತ್ ಜೂನಿಯರ್ ನ್ಯಾಷನಲ್ ಕೆಡೆಟ್ ಕುಸ್ತಿ ಚಾಂಪಿಯನ್ಶಿಪ್ 60 ಕೆಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ ಪಡೆದಿರುತ್ತಾರೆ.**

**2018(ಮಹಾರಾಷ್ಟ್ರ) 37ನೇ ಸಬ್ ಜೂನಿಯರ್ ನ್ಯಾಷನಲ್ ಕುಸ್ತಿ ಚಾಂಪಿಯನ್ಶಿಪ್ 61 ಕೆಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ.**

**2019(ಹರಿಯಾಣ) 64ನೇ ಎಸ್ ಜಿ ಎಫ್ ಐ ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ಚಿನ್ನದ ಪದಕ.**

**2020(ಮಧ್ಯಪ್ರದೇಶ)65 ನೇ ಎಸ್ ಜಿ ಎಫ್ ಐ ರಾಷ್ಟ್ರೀಯ ಕುಸ್ತಿ ಸ್ಪರ್ಧೆಯಲ್ಲಿ ಕಂಚಿನ ಪದಕ.**

**2018(ದೆಹಲಿ)ಖೇಲೂ ಇಂಡಿಯಾ ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆ 60 ಕೆಜಿ ದೇಹ ತೂಕ ವಿಭಾಗದಲ್ಲಿ ಬೆಳ್ಳಿ ಪದಕ.**

**2021(ಉತ್ತರ ಪ್ರದೇಶ)23 ವಯೋಮಿತಿ ಒಳಗಿನ ಸೀನಿಯರ್ ನ್ಯಾಷನಲ್ ರೆಸ್ಲಿಂಗ್ ಚಾಂಪಿಯನ್ಶಿಪ್ನಲ್ಲಿ ಕಂಚಿನ ಪದಕ.**

**2020(ತಮಿಳುನಾಡು) 9ನೇ ರಾಷ್ಟ್ರೀಯ ಕುಸ್ತಿ ಕ್ರೀಡಾಕೂಟ 62 ಕೆಜಿ ದೇಹ ತೂಕ ವಿಭಾಗದಲ್ಲಿ ಚಿನ್ನದ ಪದಕ.**

**2022 (ತಮಿಳುನಾಡು)10ನೇ ರಾಷ್ಟ್ರೀಯ ಕುಸ್ತಿ ಸ್ಪರ್ಧೆ 65 ಕೆಜಿ ದೇಹ ತೂಕ ವಿಭಾಗದಲ್ಲಿ ಬೆಳ್ಳಿ ಪದಕ.**

**2023 ತಮಿಳುನಾಡು ಮೊದಲ ಸೌತ್ ಇಂಡಿಯನ್ ರೆಸ್ಲಿಂಗ್ ಚಾಂಪಿಯನ್ಶಿಪ್ 23 ವಯೋಮಿತಿ ಒಳಗಿನ ಕುಸ್ತಿ ಸ್ಪರ್ಧೆಯಲ್ಲಿ ಚಿನ್ನದ ಪದಕ.**

**2024(ತಮಿಳುನಾಡು)11ನೇ ಸೌತ್ ಇಂಡಿಯಾ ಸೀನಿಯರ್ ನ್ಯಾಷನಲ್ 68 ಕೆಜಿ ದೇಹ ತೂಕ ವಿಭಾಗದಲ್ಲಿ ಚಿನ್ನದ ಪದಕ.**

**2019(ಬೆಳಗಾಂ) ಮೊದಲ ಕರ್ನಾಟಕ ಕುಸ್ತಿ ಹಬ್ಬ ಮಹಿಳಾ ಕರ್ನಾಟಕ ಕೇಸರಿ ಪ್ರಶಸ್ತಿ.**

**ಕಿತ್ತೂರು ಇಲ್ಲಿ ನಡೆದ ಮುಕ್ತ ಕುಸ್ತಿ ಸ್ಪರ್ಧೆಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಕೇಸರಿ ಪ್ರಶಸ್ತಿ-2022.**

**2020 ಧಾರವಾಡ ಎರಡನೇ ಕರ್ನಾಟಕ ಕುಸ್ತಿ ಹಬ್ಬ ಮಹಿಳಾ ಕರ್ನಾಟಕ ಕೇಸರಿ ಪ್ರಶಸ್ತಿ.**

**2019 ಮೈಸೂರು ದಸರಾ ಕುಸ್ತಿ ಸ್ಪರ್ಧೆ ದಸರಾ ಕಿಶೋರಿ ಪ್ರಶಸ್ತಿ.**

**ಜಮಖಂಡಿ ಅಲಗೂರು ಇಲ್ಲಿ ನಡೆದ ಮುಕ್ತ ಕುಸ್ತಿ ಸ್ಪರ್ಧೆಯಲ್ಲಿ ರಾಣಿ ಚೆನ್ನಮ್ಮ ಕೇಸರಿ ಪ್ರಶಸ್ತಿ-2022.**

**ಹರಿಹರ ದಾವಣಗೆರೆ ಜಿಲ್ಲೆ, ಇಲ್ಲಿ ನಡೆದ ಮುಕ್ತ ಕುಸ್ತಿ ಸ್ಪರ್ಧೆಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ-2022.**

**ಹಳಿಯಾಳದಲ್ಲಿ ಜನಪ್ರಿಯ ಶಾಸಕರಾದ ಆರ್ ವಿ ದೇಶಪಾಂಡೆಯವರು ನಡೆಸುವ ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ಒನಕೆ ಓಬವ್ವ ಪ್ರಶಸ್ತಿಯನ್ನು ಐದು ಬಾರಿ ಪಡೆದಿರುತ್ತಾರೆ.**

**ಒಟ್ಟಾರೆ 25 ರಾಷ್ಟ್ರಮಟ್ಟದ 30ಕ್ಕೂ ಹೆಚ್ಚು ರಾಜ್ಯಮಟ್ಟದ ಹಾಗೂ 15ಕ್ಕೂ ಹೆಚ್ಚು ಮುಕ್ತ ಕುಸ್ತಿ ಸ್ಪರ್ಧೆಗಳಲ್ಲಿ ಭಾಗವಹಿಸಿ 50ಕ್ಕೂ ಹೆಚ್ಚು ಪದಕಗಳನ್ನು ಪಡೆದಿರುತ್ತಾರೆ.**

**ಲೀನಾ ಸಿದ್ದಿಯವರ ಸಾಧನೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರ 2022 ರಲ್ಲಿ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ನೀಡಿ ಗೌರವಿಸಿದೆ.**

# ಬಳ್ಳಾರಿ ರಂಗಭೂಮಿಯ ತವರೂರು

## :ರಂಗಾಯಣದ ನಿರ್ದೇಶಕಿ ಡಾ.ಸುಜಾತ ಜಂಗಮಶೆಟ್ಟಿ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ಜಿಲ್ಲೆಯು ರಂಗಭೂಮಿಯ ತವರೂರರಾಗಿದೆ ಎಂದು ಕಲಬುರಗಿ ರಂಗಾಯಣದ ನಿರ್ದೇಶಕರಾದ ಡಾ.ಸುಜಾತ ಜಂಗಮಶೆಟ್ಟಿ ಅವರು ಹೇಳಿದರು.



ನಗರದ ಡಾ.ರಾಜ್ ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದ ಹೊಂಗಿರಣ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ರಂಗಭೂಮಿ ಕಲಾವಿದರೊಂದಿಗೆ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.ಕಲಬುರಗಿ ರಂಗಾಯಣವು ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳಿಗೂ ಹೊಂದಿಕೊಂಡಿದೆ. ಕಲಬುರಗಿ ರಂಗಾಯಣವನ್ನು ಕ.ಕ ಭಾಗದ ಹೋಬಳಿ ಮಟ್ಟದಲ್ಲಿಯೂ ತಲುಪಬೇಕು ಎಂಬುದು ಕಲಬುರಗಿ ರಂಗಾಯಣದ ಮುಖ್ಯ ಉದ್ದೇಶವಾಗಿದೆ. ಬಳ್ಳಾರಿ ಜಿಲ್ಲೆಗೆ ಡಾ. ಜೋಳದರಾಶಿ ದೊಡ್ಡನಗೌಡ, ರಾಘವ, ಬೆಳಗಲ್ಲು ವೀರಣ್ಣ, ಸುಭದ್ರಮ್ಮ ಮಾನ್ಸೂರು ಸೇರಿದಂತೆ ಹಲವಾರು ಗಣ್ಯರ ಕೊಡುಗೆ ಅಪಾರವಿದೆ. ಪ್ರಸ್ತುತದಲ್ಲಿ ರಂಗಭೂಮಿಯು ಅಳಿವಿಂಚಿನಲ್ಲಿದೆ. ರಂಗ ಕಲೆಯನ್ನು ಮತ್ತು ರಂಗಭೂಮಿ ಕಲಾವಿದರನ್ನು ಪ್ರೋತ್ಸಾಹಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಯುವಪೀಳಿಗೆಯು ಸಹ ರಂಗ ಪ್ರವೇಶಿಸಲು ಶಾಲಾ-ಕಾಲೇಜುಗಳಲ್ಲಿ ನಾಟಕ ರಂಗದ ಕುರಿತು ಅರಿವು ಸಂವಾದ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಹೇಳಿದರು.

**ರಂಗದಂಗಳದಲ್ಲಿ ಮಾತುಕತೆ:** ಕಲಬುರಗಿ ವ್ಯಾಪ್ತಿಯ ಏಳು ಜಿಲ್ಲೆಗಳಲ್ಲಿನ ರಂಗಕಲಾವಿದರನ್ನು ಜೊತೆಗೂಡಿಸಿ ರಂಗನಾಟಕ ಉಳಿಯುವಿಕೆ ಮತ್ತು ಬೆಳೆಸುವಿಕೆಗೆ ಅನಿಸಿಕೆ-ಅಭಿಪ್ರಾಯಗಳನ್ನು ಸಂಗ್ರಹಿಸಲು 'ರಂಗದಂಗಳದಲ್ಲಿ ಮಾತುಕತೆ' ಸಭೆ ಏರ್ಪಡಿಸಲಾಗುವುದು ಎಂದರು.

**ನಾಟಕ ರಚನಾ ಶಿಬಿರ:**

ಕ.ಕ ಭಾಗದಲ್ಲಿ ಇನ್ನು ಹಳೆಯ ನಾಟಕ ಶೈಲಿ ಒಳಗೊಂಡಿದೆ. ಇದನ್ನು ಹೊಸ ಶೈಲಿಗೆ ಅಭಿವೃದ್ಧಿ ಪಡಿಸಬೇಕಿದೆ ಮತ್ತು ಹೊಸ ನಾಟಕಕಾರರನ್ನು ಪರಿಚಯಿಸಬೇಕಿದೆ. ಈ ನಿಟ್ಟಿನಲ್ಲಿ ರಂಗಾಯಣದಿಂದ ನಾಟಕ ರಚನಾ ಶಿಬಿರ ಹಮ್ಮಿಕೊಳ್ಳಲಾಗುವುದು. ಪೋಷಕರು ಮಕ್ಕಳಿಗೆ ರಂಗಭೂಮಿಯ ಕುರಿತು ಆಸಕ್ತಿ ಮೂಡಿಸಬೇಕಿದೆ. ಶಾಲಾ-ಕಾಲೇಜುಗಳಲ್ಲಿ ನಾಟಕಕಾರರನ್ನು ಕರೆಯಿಸಿ ನಾಟಕ ಪ್ರದರ್ಶನ, ನಾಟಕ ಕುರಿತು ಸಂವಾದ ಕಾರ್ಯಕ್ರಮ ಆಯೋಜಿಸುವಂತೆ ಕ್ರಮ ವಹಿಸಲಾಗುವುದು ಎಂದರು.

ಈ ಭಾಗದ ಬಯಲಾಟ, ದೊಡ್ಡಾಟ ಮತ್ತು ತೊಗಲು ಗೊಂಬೆಯಾಟ ರಂಗ ಕಲೆಯನ್ನು ಉಳಿಸುವ ಮತ್ತು ಬೆಳೆಸುವ ಜವಾಬ್ದಾರಿ ನಮ್ಮ ಮೇಲಿದೆ. ಕಲೆ ಕುರಿತು ತರಬೇತಿ ನೀಡಲು, ಕಲೆ ಉಳಿಸಲು ಒಂದು ವಾರದ ಶಿಬಿರ ಆಯೋಜಿಸಲಾಗುವುದು. ಇದರಲ್ಲಿ ಲಿಂಗತ್ವ ಅಲ್ಪ ಸಂಖ್ಯಾತರು ಸಹ ಭಾಗವಹಿಸಲು ಒಲವು ತೋರಿಸುತ್ತಿದ್ದು, ಅವರಿಗೂ ಸಹ ಅವಕಾಶ ಕಲ್ಪಿಸಬೇಕಿದೆ ಎಂದರು.

ಗಡಿ ಭಾಗದ ಮರಾಠಿ, ತೆಲುಗು ಭಾಷೆ ರಂಗಭೂಮಿಯೊಂದಿಗೆ ಹೊಂದಿಕೊಂಡು ನಾಟಕ ಶಿಬಿರ ಹಮ್ಮಿಕೊಳ್ಳಲಾಗುವುದು. ಇದರಿಂದ ಅಲ್ಲಿನ ನಾಟಕ ಶೈಲಿ, ಆಯಾಮಗಳನ್ನು ಪರಿಚಯಿಸಿಕೊಳ್ಳಬೇಕಿದೆ. ಈ ಕುರಿತು ಗಡಿ ಅಭಿವೃದ್ಧಿ ಪ್ರಾಧಿಕಾರದ ಜೊತೆ ಚರ್ಚಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ರಂಗಭೂಮಿಯಲ್ಲಿ ಪ್ರಸ್ತುತದಲ್ಲಿನ ವಾಸ್ತವತೆ, ಬೆಳವಣಿಗೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಬಳ್ಳಾರಿಯ ರಂಗಕಲಾವಿದರೊಂದಿಗೆ ಸಂವಾದ ನಡೆಸಿದರು. ಇದೇ ವೇಳೆ ರಂಗಕಲಾವಿದರಿಂದ ಸಲಹೆ ಪಡೆದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ರಂಗಭೂಮಿಯ ಹಿರಿಯ ಕಲಾವಿದರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.



From first Look to Final Dance - We Freeze Your Beautiful Journey!
Wedding Click brings heart to every picture
Elegant Emotional Eternal
Professional Wedding Photography
Candid Moments | Creative Albums
Reserve your Date Today! 9632121359



## ಕವಿ ಮನಸು

### ವಿಶ್ವಗುರು ಬಸವ ಬಂದ



ವಿಶ್ವಗುರು ಬಸವ ಬಂದ
ಗುಡಿ ದೇವರುಗಳ ಕಂಡ
ಭಕ್ತ ಅರ್ಚಕ ಅಂತರ ತೊರೆದ

ವಿಶ್ವಗುರು ಬಸವ ಬಂದ
ಅಲ್ಲಿ ಇಲ್ಲಿ ದೇವರೆಲ್ಲಿಹ ಎಂದ
ನಮ್ಮೊಳ ಅರಿವು ಚೆಂದ ಎಂದ

ವಿಶ್ವಗುರು ಬಸವ ಬಂದ
ಜಾತಿ ಕುಲ ಗೋತ್ರ ಏಕೆಂದ
ಲಿಂಗ ಶರಣಂಗೆ ಜಾತಿ ಇಲ್ಲೆಂದ

ವಿಶ್ವಗುರು ಬಸವ ಬಂದ
ಮಡಿ ಮೇಲು ಕೀಳು ಏಕೆಂದ
ಶುದ್ಧ ಬದ್ಧ ಶರಣಂಗೆ ಇದಿಲ್ಲೆಂದ

ವಿಶ್ವಗುರು ಬಸವ ಬಂದ
ಗುಡಿದೇವರ ನಾನಾ ರೂಪ ಕಂಡ
ನಿಜ ದೇವತ್ವಕೆ ಇದು ಸಲ್ಲದೆಂದ

ವಿಶ್ವಗುರು ಬಸವ ಬಂದ
ವೇದಾಗಮೋಪನಿಷತ್ತುಗಳ ಮೀರಿದ
ವಚನ ಸಾಹಿತ್ಯವೇ ಶರಣ ಜೀವವೆಂದ

ವಿಶ್ವಗುರು ಬಸವ ಬಂದ
ಕನ್ನಡ ಲಿಂಗಧರ್ಮವ ತಂದ
ಜನ ಸಮಾನವೇ ಮಾನವೆಂದ

ವಿಶ್ವಗುರು ಬಸವ ಬಂದ
ಅನುಭವ ಮಂಟಪ ಪ್ರಜಾ ಮಂಟಪವೆಂದ
ಜಾತ್ಯಾತೀತ ವಿಶ್ವಬಂಧುತ್ವ ತಂದ

ವಿಶ್ವಗುರುಬಸವ ಬಂದ
ಲಿಂಗಾಯತ ಧರ್ಮ ತಂದ
ದೇವ ಲಿಂಗದೇವ ಒಂದೇ ಎಂದ

ವಿಶ್ವಗುರು ಬಸವ ಬಂದ
ಜಗಕೆ ವಿಶ್ವಗುರುವೇ ತಾನಾದ
ನಿಜ ವಿಶ್ವಧರ್ಮವ ಧರೆಗೆ ತಂದ

– ಸೋ ದಾ ವಿರೂಪಾಕ್ಷ ಗೌಡ
ಹೊಸಪೇಟೆ

REACH
your Customers
with us!
Call us for
PRINT & DIGITAL
Advertisements
Effective, affordable
and everywhere
your customers are!
94486
33038
HAMPI TIMES - VIJAYANAGARA

# ಕೇಂದ್ರ ಸರ್ಕಾರದಿಂದ ಬೆಲೆ ಏರಿಕೆಯ ಬರೆ

## ಕೇಂದ್ರದ ವಿರುದ್ಧ ಗುಡುಗಿದ ಸಿಎಂ ಸಿದ್ದರಾಮಯ್ಯ | ಸಿಎಂ ಭಾಷಣಕ್ಕೆ ಅಡ್ಡಿ | ಬಿಜೆಪಿ–RSSಗೆ ಸವಾಲೆಸೆದ ಸಿಎಂ

**■ ಹಂಪಿ ಟೈಮ್ಸ್ ಬೆಳಗಾವಿ**

ನಾವು ಬಿಜೆಪಿ–RSS ಗೊಡ್ಡು ಬೆದರಿಕೆಗಳಿಗೆ ಜಗ್ಗಲ್ಲ–ಬಗ್ಗಲ್ಲ. ನಿಮ್ಮನ್ನೆಲ್ಲಾ ಸಾರ್ವಜನಿಕವಾಗಿ ಎದುರಿಸುವ ಶಕ್ತಿ ನನಗಿದೆ. ನಮ್ಮ ಕಾರ್ಯಕರ್ತ ರಿಗೂ ಇದೆ ಎಂದು ಸಿಎಂ ಸಿದ್ದರಾಮಯ್ಯ ಗುಡುಗಿದರು.

AICC ಆಯೋಜಿಸಿದ್ದ ಕೇಂದ್ರ ಸರ್ಕಾರದ ಬೆಲೆ ಏರಿಕೆ, ಜನ ವಿರೋಧಿ ನೀತಿ ಹಾಗೂ ದೇಶ ವಿರೋಧಿ ಆಡಳಿತ ವಿರೋಧಿ ಖಂಡನಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಬಿಜೆಪಿಯ ದೇಶ ವಿರೋಧಿ ಆಡಳಿತ, ಜನ ವಿರೋಧಿ ಕ್ರಮಗಳನ್ನು ಖಂಡಿಸಿ ಭಾಷಣ ಮಾಡುವ ವೇಳೆ ಮುಖ್ಯಮಂತ್ರಿಗಳ ಭಾಷಣಕ್ಕೆ ಅಡ್ಡಿ ಪಡಿಸಿದ ಬಿಜೆಪಿ ಕಿಡಿಗೇಡಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಮುಖ್ಯಮಂತ್ರಿಗಳು ಬಿಜೆಪಿ–RSS ಗೆ ನೇರವಾಗಿ ಸವಾಲೆಸೆದು ಸೆಡ್ಡು ಹೊಡೆದರು. ಕಳೆದ ಹತ್ತು ವರ್ಷಗಳಿಂದ ನಿರಂತರವಾಗಿ ಬೆಲೆ ಏರಿಕೆ ಮಾಡುತ್ತಾ, ಭಾರತೀಯರ ಬದುಕನ್ನು ಬೆಲೆ ಏರಿಕೆಯಲ್ಲಿ ಬೇಯಿಸುತ್ತಾ, ಭಾರತೀಯ ಸಮಾಜವನ್ನು ಛಿದ್ರಗೊಳಿಸುತ್ತಾ, ಬಿರುಕು ಮೂಡಿಸುತ್ತಾ ಜನದ್ರೋಹಿಯಾಗಿ ವರ್ತಿಸುತ್ತಿರುವುದು ಬಿಟ್ಟರೆ ಬೇರೆ ಏನು ಮಾಡಿದ್ದೀರಿ ತೋರಿಸಿ ಜನರಿಗೆ ಎಂದು ಸವಾಲು ಹಾಕಿದರು.

ಭಾರತೀಯರು ಬ್ರಿಟೀಷರ ವಿರುದ್ಧ ಪ್ರಾಣತ್ಯಾಗ ಮಾಡಿ ಹೋರಾಡುತ್ತಿದ್ದಾಗ ನೀವು ಸಂಘ ಪರಿವಾರದವರು ಏನು ಕಡೆದು ಕಟ್ಟೆ ಹಾಕ್ತಿದ್ರಿ ? ಸ್ವಾತಂತ್ರ್ಯ. ಹೋರಾಟಕ್ಕೆ ಏಕೆ ಬರಲಿಲ್ಲ ? ಏನ್ ಮಾಡ್ತಾ ಕೂತಿದ್ರಿ ಆಗ ಎಂದು ಪ್ರಶ್ನಿಸಿದರು.





ಮೊನ್ನೆ ಕಾಶ್ಮೀರದಲ್ಲಿ ಅಮಾಯಕ ಭಾರತೀಯರನ್ನು, ಕರ್ನಾಟಕದ ಮೂವರು ಅಮಾಯಕರನ್ನು ರಾಜಾರೋಷವಾಗಿ ಗನ್ ಗಳ ಸಮೇತ ಬಂದು ಅಮಾನುಷವಾಗಿ ಹತ್ಯೆ ಮಾಡಿ ಹೋದರಲ್ಲಾ ಇದು ಕೇಂದ್ರ ಸರ್ಕಾರದ ಭದ್ರತಾ ಲೋಪ ಅಲ್ಲವಾ ? ಭಾರತೀಯರಿಗೆ ರಕ್ಷಣೆ ಕೊಡುವುದರಲ್ಲಿ ವಿಫಲ ಆಗಿರುವುದನ್ನು ನಾವು ಭಾರತೀಯರು ಪ್ರಶ್ನಿಸಬಾರದಾ ? ಪ್ರಶ್ನಿಸಿದರೆ ಕಾರ್ಯಕ್ರಮಕ್ಕೆ ಅಡ್ಡಿ ಪಡಿಸ್ತೀರಾ ಎಂದು ಪ್ರಶ್ನಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ಬಂದು 52 ವರ್ಷಗಳ ಕಾಲ ಖಖಖ ಕಚೇರಿ ಮೇಲೆ ಭಾರತದ ಬಾವುಟ ಹಾರಿಸಲೇ ಇಲ್ಲ ನೀವು. ಇದಕ್ಕೂ ನಾಚಿಕೆ ಆಗುವುದಿಲ್ಲವೇ ನಿಮಗೆ ಎಂದು ಪ್ರಶ್ನಿಸಿದರು.

ಸ್ವಾತಂತ್ರ್ಯ ಹೋರಾಟದಿಂದ ಹಿಡಿದು ಆಧುನಿಕ ಭಾರತ ನಿರ್ಮಾಣದವರೆಗೂ ಬಿಜೆಪಿ, ಸಂಘ ಪರಿವಾರದ ಕೊಡುಗೆ ಏನಿದೆ ? ನಾಚಿಕೆ ಇಲ್ಲದೆ ದೇಶಭಕ್ತಿ ಬಗ್ಗೆ ಮಾತಾಡ್ತೀರಾ. ಭಾರತೀಯ ಸಮಾಜವನ್ನು ಬಿರುಕು ಮೂಡಿಸಿದ್ದು ಬಿಟ್ಟರೆ ಇಷ್ಟು ವರ್ಷಗಳ ನಿಮ್ಮ ಕೊಡುಗೆ ಭಾರತಕ್ಕೆ ಏನು ಕೊಟ್ಟಿದ್ದೀರಿ ಎಂದು ದೇಶದ ಜನಕ್ಕೆ ವಿವರಿಸಿ ಎಂದು ಸವಾಲು ಹಾಕಿದರು.

ಮನಮೋಹನ್ ಸಿಂಗ್ ಅವರು ಪ್ರಧಾನಿ ಆಗಿದ್ದಾಗ ಅತ್ಯಂತ ಶ್ರೀಮಂತರ ಮೇಲೆ 32% ಟ್ಯಾಕ್ಸ್ ಇತ್ತು. ಮೋದಿ ಬಂದ ಮೇಲೆ ಅತ್ಯಂತ ಶ್ರೀಮಂತರ ಮೇಲಿನ ತೆರಿಗೆಯನ್ನು ಶೇ25 ಇಳಿಸಿದಿರಿ. ಬಡವರು, ಮಧ್ಯಮ ವರ್ಗದವರ ಮೇಲಿನ ತೆರಿಗೆಯನ್ನು ಹೆಚ್ಚಿಸಿದಿರಿ. ನಾಚಿಕೆ ಆಗುತ್ತಿಲ್ಲ ನಿಮಗೆ. ಬಡವರ, ಮಧ್ಯಮ ವರ್ಗದವರ ವಿರೋಧಿ ಬಿಜೆಪಿಯ ಆಡಳಿತವನ್ನು ಪ್ರಶ್ನಿಸಬಾರದಾ ? ಭಾರತೀಯರನ್ನು ನಿರಂತರ ಸುಳ್ಳುಗಳಲ್ಲಿ ಇನ್ನೂ ಎಷ್ಟು ವರ್ಷ ಮರಳು ಮಾಡ್ತೀರಿ. ಸತ್ಯ ಹೇಳಿ ಎಂದು ಸವಾಲು ಹಾಕಿದರು.

ಭಾರತದ ಸ್ವಾತಂತ್ರ್ಯಕ್ಕೆ ಪ್ರಾಣ ತ್ಯಾಗ ಮಾಡಿದ ಕಾಂಗ್ರೆಸ್ ಪಕ್ಷಕ್ಕೆ ಹೋರಾಟ ಹೊಸದಲ್ಲ. ಬ್ರಿಟೀಷರನ್ನೇ ಒದ್ದೋಡಿಸಿದ ನಮಗೆ ನೀವು ಬಿಜೆಪಿ–ಖಖಖ ನ್ನೂ ಎದುರಿಸಿ ನಿಲ್ಲುವ ಶಕ್ತಿ ಇದೆ ಎಂದರು.

ನಾವು ಹಾಲಿನ ದರ 4 ರೂ ಹೆಚ್ಚಿಸಿ, ಇಡೀ 4 ರೂಪಾಯಿಯನ್ನು ಪೂರ್ತಿಯಾಗಿ ರೈತರಿಗೆ, ಗೋಪಾಲಕರಿಗೆ, ಗೋ ಸಾಕಾಣಿಕೆದಾರರಿಗೆ ವರ್ಗಾಯಿಸಿದ್ದೀವಿ. ಇದರಲ್ಲಿ ಒಂದು ರೂಪಾಯಿ ಕೂಡ ಸರ್ಕಾರಕ್ಕೆ ಬರಲ್ಲ. ನಾವು 4 ರೂ ಹೆಚ್ಚಿಸಿದರೂ ಹಾಲಿನ ದರ ಇಡೀ ದೇಶದಲ್ಲಿ ಕಡಿಮೆ ಇರುವುದು ನಮ್ಮ ರಾಜ್ಯದಲ್ಲಿ ಮಾತ್ರ. ಬಸ್ ದರ, ನೀರಿನ ದರ, ವಿದ್ಯುತ್ ದರ ಅಕ್ಕ ಪಕ್ಕದ ರಾಜ್ಯಗಳಿಗಿಂತ ಅತ್ಯಂತ ಕಡಿಮೆ ಇರುವುದು ನಮ್ಮ ರಾಜ್ಯದಲ್ಲಿ ಮಾತ್ರ. ನಿಮ್ಮ ಸುಳ್ಳು, ಅಪಪ್ರಚಾರ, ಬೆದರಿಕೆಗೆ ಈ ಸಿದ್ದರಾಮಯ್ಯ ಹೆದರುವವನಲ್ಲ. ನಿಮ್ಮನ್ನು ಮೆಟ್ಟಿ ನಿಲ್ತೀವಿ. ಕಾಂಗ್ರೆಸ್ ಸರ್ಕಾರಕ್ಕೆ ಆ ಶಕ್ತಿ ಇನ್ನೂ ಇದೆ ಎಂದರು.

ಅಕ್ಕಿ, ಎಣ್ಣೆ, ಚಿನ್ನ, ಬೆಳ್ಳಿ, ಗೊಬ್ಬರ, ಕಾಳು, ಬೇಳೆ, ಡೀಸೆಲ್, ಪೆಟ್ರೋಲ್, ಸಿಲಿಂಡರ್ ಎಲ್ಲದರ ಬೆಲೆ ಏರಿಸಿದ್ದೀರಿ. ಯಾವುದನ್ನು ಬಿಟ್ಟಿದ್ದೀರಿ ಹೇಳಿ ಎಂದರು.

ಕಚ್ಚಾ ತೈಲ ಬೆಲೆ ಕಡಿಮೆ ಇದ್ದಾಗಲೂ ಪೆಟ್ರೋಲ್, ಡೀಸೆಲ್ ಬೆಲೆ ಮಾತ್ರ ನಿರಂತರವಾಗಿ ಏರಿಕೆ ಮಾಡುತ್ತಲೇ ಇರುವುದು ಭಾರತೀಯರಿಗೆ ಬಿಜೆಪಿ ಬಗೆಯುತ್ತಿರುವ ಮಹಾ ದ್ರೋಹ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ನಿರಂತರವಾಗಿ ಭಾರತೀಯರನ್ನು ಸುಳ್ಳುಗಳ ಸರಮಾಲೆಯಲ್ಲಿ ಮುಳುಗಿಸಿ, ಸಮಾಜವನ್ನು ಬಿರುಕು ಮೂಡಿಸಿ ಕಾಲ ಕಳೆಯುತ್ತಿದೆ. ನಿಮಗೆ ತಕ್ಕ ಉತ್ತರ ಕೊಡುವ ಶಕ್ತಿ ನಮಗಿದೆ. ನಾವು ಉತ್ತರ ಕೊಡ್ತೀವಿ ಎಂದರು.

# ಬೇಸಿಗೆಯಲ್ಲಿ ಆರೋಗ್ಯದತ್ತ ಹೆಚ್ಚಿನ ಕಾಳಜಿ ಇರಲಿ

## ಸಹಾಯಕ ನಿರ್ದೇಶಕರು ಹೆಚ್.ವಿಜಯಕುಮಾರ್ ಸಲಹೆ | ನರೇಗಾ ಕೂಲಿಕಾರರಿಗೆ ಆರೋಗ್ಯ ತಪಾಸಣೆ





ನರೇಗಾ ಯೋಜನೆಯಡಿ ಕೆಲಸ ಮಾಡುವ ಕೂಲಿಕಾರ ಆರೋಗ್ಯ ದೃಷ್ಟಿಯಿಂದ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಆರೋಗ್ಯ ತಪಾಸಣೆ ಶಿಬಿರ ಆಯೋಜನೆ ಮಾಡಲಾಗುತ್ತಿದೆ. ಕೂಲಿಕಾರರು ಆರೋಗ್ಯ ಶಿಬಿರದ ಸದುಪಯೋಗ ಪಡೆದುಕೊಂಡು ಆರೋಗ್ಯಯುತ ಜೀವನ ತಮ್ಮದಾಗಿಸಿ ಕೊಳ್ಳಬೇಕು.

– ಡಾ.ಬಿ.ಆನಂದ್ ಕುಮಾರ್
ಇ.ಒ., ತಾಪಂ ಕೊಟ್ಟೂರು

**■ ಹಂಪಿ ಟೈಮ್ಸ್ ಕೊಟ್ಟೂರು**

ನರೇಗಾ ಕಾಮಗಾರಿ ಸ್ಥಳದಲ್ಲಿ ಕೂಲಿಕಾರರ ಆರೋಗ್ಯ ತಪಾಸಣೆ ಮಾಡಲಾಗುತ್ತಿದ್ದು, ಪ್ರತಿಯೊಬ್ಬರೂ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕೊಟ್ಟೂರು ತಾಲ್ಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕರು (ಗ್ರಾ.ಉ) ಹೆಚ್.ವಿಜಯಕುಮಾರ್ ಅವರು ಸಲಹೆ ನೀಡಿದರು.

ಜಿಲ್ಲಾ ಪಂಚಾಯಿತಿ ವಿಜಯನಗರ, ತಾಲ್ಲೂಕು ಪಂಚಾಯಿತಿ ಕೊಟ್ಟೂರು, ಗ್ರಾಪಂ ರಾಂಪುರ ಹಾಗೂ ಆರೋಗ್ಯ ಇಲಾಖೆ, ಕೆಹೆಚ್‌ಪಿಟಿ ಸಹಯೋಗದಲ್ಲಿ ಜಾಗಟಗೆರೆ ಗ್ರಾಮದ ಹೊರವಲಯದಲ್ಲಿ ನರೇಗಾ ಯೋಜನೆಯಡಿ ಕೈಗೊಂಡಿರುವ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ ಸೋಮವಾರ ಆಯೋಜಿಸಿದ್ದ ಕೂಲಿಕಾರರಿಗೆ ಆರೋಗ್ಯ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರಸಕ್ತ ವರ್ಷ ಹೆಚ್ಚಿನ ಬಿಸಿಲು ಇದೆ. ಬಿಸಿಲಿನ ತಾಪಮಾನ ದಿಂದ ಕೂಲಿಕಾರರಿಗೆ ತಲೆ ಸುತ್ತು, ರಕ್ತದ ಒತ್ತಡ ಹೆಚ್ಚಳ ಹೀಗೆ ನಾನಾ ಅನಾರೋಗ್ಯದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಕಾಮಗಾರಿ ಸ್ಥಳದಲ್ಲಿ ರಕ್ತದೊತ್ತಡ, ಶುಗರ್, ವಾಂತಿ, ಭೇದಿ ಪ್ರಕರಣದ ಬಗ್ಗೆ ತಪಾಸಣೆ ಮಾಡಲಾಗುತ್ತಿದೆ. ಎಲ್ಲ ಕೂಲಿಕಾರರು ತಪಾಸಣೆಗೆ ಒಳಗಾಗಿ ಶಿಬಿರದ ಪ್ರಯೋಜನ ಪಡೆದುಕೊಳ್ಳುವಂತೆ ತಿಳಿಸಿದರು.

ಆರೋಗ್ಯ ಇಲಾಖೆಯ ಸಿಹೆಚ್‌ಒ ಶೋಭಾ ಮಾತನಾಡಿ, ಬಿಸಿಲಿನ ಸಂದರ್ಭದಲ್ಲಿ ಕೆಲಸ ಮಾಡುವುದರಿಂದ ಬಿಪಿ ಹೆಚ್ಚಾಗಿರುತ್ತದೆ. ಇದರಿಂದ ತಲೆ ಸುತ್ತು ಬಂದು ಬೀಳುವ ಸಾಧ್ಯತೆ ಇರುತ್ತದೆ. ಶಿಬಿರದಲ್ಲಿ ಕ್ಯಾನ್ಸರ್ ಪರೀಕ್ಷೆಯನ್ನು ಸಹಾ ಮಾಡಲಾಗುತ್ತಿದೆ. ತಂಬಾಕು ಸೇವನೆಯಿಂದ ಕ್ಯಾನ್ಸರ್ ಕಾಯಿಲೆಗೆ ತುತ್ತಾಗುವ ಸಾಧ್ಯತೆ ಇರುತ್ತದೆ ಹೀಗಾಗಿ ತಂಬಾಕು ಸೇವನೆಯನ್ನು ಬಿಡಬೇಕು. ಶುದ್ಧ , ಕಾಯಿಸಿ ಆರಿಸಿದ ನೀರನ್ನು ಸೇವನೆ ಮಾಡಬೇಕು. ಕಲುಷಿತ ನೀರು ಸೇವನೆಯಿಂದ ಅನಾರೋಗ್ಯಕ್ಕೆ ತುತ್ತಾಗಬೇಕಾಗುತ್ತದೆ. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜೀವಹಿಸಬೇಕು ಎಂದು ಹೇಳಿದರು.

ಗ್ರಾಪಂ ಅಭಿವೃದ್ಧಿ ಅಧಿಕಾರಿ ಸಿ.ಉಮಾಪತಿ, ಸದಸ್ಯರಾದ ನಾಗರಾಜ್, ತಾಂತ್ರಿಕ ಸಂಯೋಜಕರಾದ ಶ್ರೀಕಾಂತ್ ಡಿ.ಎಂ., ಐಇಸಿ ಸಂಯೋಜಕ ಪ್ರಭುಕುಮಾರ್, ತಾಂತ್ರಿಕ ಸಹಾಯಕ ರವಿಕುಮಾರ್ ನಾಯ್ಕ, ಬಿಎಫ್ಟಿ ಗಂಗಾಧರ್, ಸಾವಿತ್ರಮ್ಮ, ಮೇಟಿ ರುದ್ರೇಶ್, ಆಶಾ ಕಾರ್ಯಕರ್ತೆಯರು, ಆರೋಗ್ಯ ಇಲಾಖೆಯ ಸಿಬ್ಬಂದಿ, ಕೂಲಿಕಾರರು ಇದ್ದರು.

# ಸ್ಮಶಾನ ಕಾಮಗಾರಿ ಪರಿಶೀಲಿಸಿದ ಜಿಪಂ ಸಿಇಒ

**■ ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲೂಕಿನ ಹಲುವಾಗಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲುವಾಗಲು ಗ್ರಾಮದಲ್ಲಿ ಮನರೇಗಾದಡಿ ಅಭಿವೃದ್ಧಿ ಪಡಿಸಿದ ಸ್ಮಶಾನ ಕಾಮಗಾರಿ ಸ್ಥಳಕ್ಕೆ ವಿಜಯನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಶಾ ಅವರು ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ವೈ.ಚ್., ನರೇಗಾ ಸಹಾಯಕ ನಿರ್ದೇಶಕ ಯು. ಎಚ್.ಸೋಮಶೇಖರ್, ಟಿಐಇಸಿ ವಸಿಗೇರಪ್ಪ, ಟಿಸಿ ನಾಗರಾಜ ನಾಯ್ಕ, ಟಿಎಇ ಲೋಕೇಶ್ ನಾಯ್ಕ ಹಾಗೂ ಗ್ರಾಪಂ ಸಿಬ್ಬಂದಿ ಇದ್ದರು.





# ಹಳ್ಳಿ ರಸ್ತೆ ಅಗಲೀಕರಣಕ್ಕೆ ಒತ್ತುವರಿ ತೆರವಿಗೆ ಸೂಚನೆ



**ಮೊದಲ ಪುಟದಿಂದ**

ಇಂಜಿನಿಯರುಗಳಿಗೆ ಸೂಚಿಸಿದರು. ಚಿಕ್ಕಮೇಗಳಗೇರಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ, ಚಿಕ್ಕ ಮಕ್ಕಳು ಕುಡಿದು ಹಾಳಾಗುತ್ತಿದ್ದಾರೆ, ಬಂದ್ ಮಾಡಿಸಿ ಎಂದು ಮಹಿಳೆಯರ ಗುಂಪು ಅರ್ಜಿ ಸಲ್ಲಿಸಿ ಮನವಿ ಮಾಡಿತು, ಜಿಲ್ಲಾಧಿಕಾರಿಗಳು ಅಬಕಾರಿ ಇಲಾಖೆಯವರಿಗೆ ಅಕ್ರಮ ಮದ್ಯೆ ಬಂದ್ ಮಾಡಿಸಲು ಸೂಚಿಸಿದರು. ತಾಲೂಕಿನಲ್ಲಿ ಇರುವ ಜಾನುವಾರುಗಳಿಗೆ ತಕ್ಕಂತೆ ಗೋಮಾಳ ಕಾಯ್ದಿರಿಸಿ ಎಂದು ಅರ್ಜಿ ಸಲ್ಲಿಸಲಾಯಿತು.

**ಹೋಟಲ್‌ಗೆ ಹಳೇ ತಹಶೀಲ್ದಾರ್ ಕಚೇರಿ ಕೊಡಿ:** ಬ್ರಿಟೀಷರ ಕಾಲದಲ್ಲಿ ಕಟ್ಟಿರುವ ಪಟ್ಟಣದ ಹಳೆ ತಹಶೀಲ್ದಾರ ಕಚೇರಿ ಕಟ್ಟಡವನ್ನು ಹೋಟೆಲ್ ನಡೆಸಲು ಬಾಡಿಗೆ ಕೊಡಿ ಎಂಬ ವಿಚಿತ್ರ ಬೇಡಿಕೆಯನ್ನು ಕೋಡಿಹಳ್ಳಿ ಶೇಖಪ್ಪ ಎಂಬಾತ ಅರ್ಜಿ ಸಲ್ಲಿಸಿದ್ದು ಶಾಸಕರು ಹಾಗೂ ಜಿಲ್ಲಾಧಿಕಾರಿ ಹಾಗೆ ಕೊಡಲು ಬರುವುದಿಲ್ಲ ಹೋಗಿ ಎಂದು ತಿಳಿ ಹೇಳಿದರು.

ದ್ಯಾಪನಾಯಕನಹಳ್ಳಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಿ ನೀರಿನ ಬವಣೆ ತಪ್ಪಿಸಿ ಎಂದು ಗ್ರಾಮಸ್ಥ ಕೋರಿದಾಗ ಜಿಲ್ಲಾಧಿಕಾರಿ ದಿವಾಕರ ಅವರು ಸದರಿ ಗ್ರಾಮ ಸೇರಿದಂತೆ ಯಾವ ಯಾವ ಗ್ರಾಮಗಳಲ್ಲಿ ಶುದ್ಧ ನೀರಿನ ಘಟಕ ಇಲ್ಲವೊ ಅಂತಹ ಗ್ರಾಮಗಳಿಗೆ ಇಒಗೆ ಮಂಜೂರಾತಿಗಾಗಿ ಪ್ರಸ್ಥಾವನೆ ಸಲ್ಲಿಸಿ ಎಂದು ಹೇಳಿದರು.

ಸಾಸ್ವಿಹಳ್ಳಿ ಬಳಿ ಇರುವ ಪುಣ್ಯ ನಗರಕ್ಕೆ ರಸ್ತೆ ಅಭಿವೃದ್ದಿಗೆ ಜನರು ಮನವಿ ಸಲ್ಲಿಸಿದರು, ಸರ್ವೆ ಇಲಾಖೆ ಮೇಲೆ ಸಾಕಷ್ಟು ದೂರುಗಳಿವೆ ಸರಿಯಾಗಿ ಕೆಲಸ ಮಾಡಿ ಎಂದು ಜಿಲ್ಲಾಧಿಕಾರಿಗಳು ಸರ್ವೆ ಇಲಾಖೆಯವರಿಗೆ ಸೂಚಿಸಿದರು.

ಪೌರ ಕಾರ್ಮಿಕರು ಬೇಡಿಕೆಗಳ ಈಡೇರಿಕೆಗೆ ಮನವಿ ಪತ್ರ ಸಲ್ಲಿಸಿದರು, ಕೆ.ಕಲ್ಲಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 400 ಮಕ್ಕಳಿವೆ, ಶೌಚಾಲಯ ನಿರ್ಮಿಸಿ ಎಂದು ಗ್ರಾಮಸ್ಥರು ಬೇಡಿಕೆ ಇಟ್ಟಾಗ ಈಗಾಗಲೇ ಅರ್ಧ ಕಾಮಗಾರಿ ಪೂರ್ಣಗೊಂಡು ಗ್ರಾ.ಪಂ ಸದಸ್ಯರ ಭಿನ್ನಾಭಿಪ್ರಾಯದಿಂದ ಸ್ಥಗಿತಗೊಂಡಿದೆ ಎಂದು ಗ್ರಾ.ಪಂ ಅಧಿಕಾರಿಗಳು ತಿಳಿಸಿದರು.

ಇದೇ ವೇಳೆ ಕೆಲ ಮಹಿಳಾ ಫಲಾನುಭವಿಗಳಿಗೆ ವಿಧವಾ ವೇತನ ಮಂಜೂರಾತಿ ಆದೇಶ ಪ್ರತಿ ಹಾಗೂ ತೆಲಿಗಿ ಗ್ರಾಮದಲ್ಲಿ ಸಿಡಿಲಿಗೆ ಬಲಿಯಾದ ಚನ್ನಗಿರಿ ಹಾಲೇಶಪ್ಪನವರ ಪುತ್ರನಿಗೆ 5 ಲಕ್ಷ ಪರಿಹಾರದ ಮಂಜೂರಾತಿ ಆದೇಶ ಪ್ರತಿಯನ್ನು ಶಾಸಕರು ವಿತರಿಸಿದರು. ಒಟ್ಟು 242 ಅರ್ಜಿಗಳು ಜನಸ್ಪಂದನ ಕಾರ್ಯಕ್ರಮದಲ್ಲಿ ಸಲ್ಲಿಸಲ್ಪಟ್ಟವು. ಸಾರ್ವಜನಿ ಕರಿಂದ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಬೇಗ ವಿಲೇವಾರಿ ಮಾಡಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿ.ಪಂ ಸಿಇಒ ನೊಂಗ್ಜಾಯ್ ಮೊಹಮದ್ ಅಲಿ ಅಕ್ರಂ ಷಾ, ಉಪವಿಭಾಗಾಧಿಕಾರಿ ಚಿದಾನಂದಗುರುಸ್ವಾಮಿ, ಡಿವೈಎಸ್ಪಿ ವೆಂಕಟಪ್ಪ ನಾಯಕ, ತಹಶೀಲ್ದಾರ ಬಿ.ವಿ.ಗಿರೀಶಬಾಬು, ತಾ.ಪಂ ಇಒ ಚಂದ್ರಶೇಖರ್, ಮತ್ತೂರು ಬಸವರಾಜ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.